Swabhimani Sahakari
Pages : 24 / 12₹
Volume - 18
Issue - 05
May - 2021

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


**ಮೇಫ್ಲವರ್/ಕೆಂಪುತುರಾಯಿ/ ಗುಲ್‌ಮೋಹರ್**

ಮೇ ಮಾಹೆಯ ಬೀದಿ ಬದಿಯ
ಕೆಂಗನಸಿನ ಈ ಮರ
ತಿರುಗಿದಂತೆ ತೋರುತಿಹುದು
ಬುಗುರಿಯೊಂದು ಗಿರಗಿರ

ಹಚ್ಚ ಹಸಿರು ಮುಚ್ಚಿ ಹೋಗಿ
ಅಚ್ಚಗೆಂಪು ಹೊರೆಹೊರೆ
ಗೊಂಚಲಿಸಿದೆ, ಬಿಚ್ಚು ಮನದ
ಪ್ರಕೃತಿ ಮೆಚ್ಚಿ ಹರಸಿರೆ.

–ಕೆ. ಎಸ್. ನಿಸಾರ್ ಅಹಮದ್




◀ ಮೇ..1
ಕಾರ್ಮಿಕರ ದಿನ

◀ ಮೇ..14
ಬಸವ ಜಯಂತಿ ಹಾಗೂ ರಂಜಾನ್

◀ ಮೇ..17
ಶಂಕರ ಜಯಂತಿ

◀ ಮೇ..21
ಬುದ್ಧ ಪೂರ್ಣಿಮ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5298

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1376



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

"ಈ ಮಹಾಮಾರಿಯನ್ನು ತಡೆಯುವುದಕ್ಕಾಗಿ ಕೇಂದ್ರ ಸರಕಾರ ಎಲ್ಲ ರಾಜ್ಯಗಳಿಗೆ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ವ್ಯಾಕ್ಸಿನೇಷನ್‌ನ್ನು ಸರಬರಾಜು ಮಾಡುತ್ತಿದೆ. ಪ್ರಾರಂಭದಲ್ಲಿ 60 ವರ್ಷ ಮೇಲ್ಪಟ್ಟವರಿಗೆ ವ್ಯಾಕ್ಸಿನೇಷನ್ ಕೊಡಲಾಗುತ್ತಿದ್ದು. ನಂತರದಲ್ಲಿ 45 ವರ್ಷದ ಮೇಲ್ಪಟ್ಟವರಿಗೆ ವ್ಯಾಕ್ಸಿನೇಶನ್ ಕೊಡಿಸುವ ವ್ಯವಸ್ಥೆ ಪ್ರಾರಂಭವಾಗಿ ಈಗ ಮೇ 1ನೇ ತಾರೀಖಿನಿಂದ 18 ವರ್ಷ ಮೇಲ್ಪಟ್ಟವರಿಗೂ ಕೊಡಿಸುವ ವ್ಯವಸ್ಥೆಯನ್ನು ಮಾಡಿರುವುದು ಸಂತೋಷದ ಹಾಗೂ ನೆಮ್ಮದಿಯ ವಿಚಾರ. ಇದರ ಜೊತೆಗೆ ರೆಮ್ಡೆಸ್ವಿರ್ ಇಂಜೆಕ್ಷನ್‌ಗಳನ್ನು ಆಕ್ಸಿಜನ್‌ಗಳನ್ನು ಸರಬರಾಜು ಮಾಡುತ್ತಿದೆ."

# ಕೋರೋನಾ 2ನೇ ಅಲೆ : ಸಹಕಾರಿ ಸಂಸ್ಥೆಗಳು ಹಾಗೂ ಸೌಹಾರ್ದ ಸಹಕಾರಿಗಳು ಈ ಮಹಾಮಾರಿ ಹರಡದಂತೆ ಅಗತ್ಯ. ಕ್ರಮಗಳ ಜಾರಿ ಅವಶ್ಯಕ

**ಆತ್ಮೀಯರೆ,**

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಹಾಗೂ ಕಾರ್ಮಿಕ ಬಂಧುಗಳಿಗೆ ಹೃದಯಪೂರ್ವಕ ಶುಭಹಾರೈಕೆಗಳು. ಕೋರೋನಾ ಎರಡನೇಯ ಅಲೆ ದೇಶಾದ್ಯಂತ ದೊಡ್ಡ ಸಾಂಕ್ರಮಿಕ ರೋಗವಾಗಿ ವೇಗವಾಗಿ ಹರಡುತ್ತಿದೆ. ಆಸ್ಪತ್ರೆಗಳಲ್ಲಿ ಅಗತ್ಯ ತುರ್ತು ಚಿಕಿತ್ಸೆಗಾಗಿ ಜನ ಪರದಾಡುವಂತಾಗಿದೆ. ಅನೇಕರು ಸಾವಿಗಿಡಾಗಿದ್ದಾರೆ. ವಿಶೇಷವಾಗಿ ಬೆಂಗಳೂರಿನಲ್ಲಿ ಶವ ಸಂಸ್ಕಾರಕ್ಕೂ ಸಹ ಕಷ್ಟ ಪಡುತ್ತಿರುವುದು ದುಃಖದ ಸಂಗತಿ.

ಈ ಮಹಾಮಾರಿಯನ್ನು ತಡೆಯುವುದಕ್ಕಾಗಿ ಕೇಂದ್ರ ಸರಕಾರ ಎಲ್ಲ ರಾಜ್ಯಗಳಿಗೆ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ವ್ಯಾಕ್ಸಿನೇಷನ್‌ನ್ನು ಸರಬರಾಜು ಮಾಡುತ್ತಿದೆ. ಪ್ರಾರಂಭದಲ್ಲಿ 60 ವರ್ಷ ಮೇಲ್ಪಟ್ಟವರಿಗೆ ವ್ಯಾಕ್ಸಿನೇಷನ್ ಕೊಡಲಾಗುತ್ತಿದ್ದು. ನಂತರದಲ್ಲಿ 45 ವರ್ಷದ ಮೇಲ್ಪಟ್ಟವರಿಗೆ ವ್ಯಾಕ್ಸಿನೇಶನ್ ಕೊಡಿಸುವ ವ್ಯವಸ್ಥೆ ಪ್ರಾರಂಭವಾಗಿ ಈಗ ಮೇ 1ನೇ ತಾರೀಖಿನಿಂದ 18 ವರ್ಷ ಮೇಲ್ಪಟ್ಟವರಿಗೂ ಕೊಡಿಸುವ ವ್ಯವಸ್ಥೆಯನ್ನು ಮಾಡಿರುವುದು ಸಂತೋಷದ ಹಾಗೂ ನೆಮ್ಮದಿಯ ವಿಚಾರ. ಇದರ ಜೊತೆಗೆ ರೆಮ್ಡೆಸ್ವಿರ್ ಇಂಜೆಕ್ಷನ್‌ಗಳನ್ನು ಆಕ್ಸಿಜನ್‌ಗಳನ್ನು ಸರಬರಾಜು ಮಾಡುತ್ತಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಹೆಚ್ಚು ಸಮಾಜಮುಖಿಯಾಗಿ ಈ ಸಂದರ್ಭದಲ್ಲಿ ಕಾರ್ಯನಿರ್ವಹಿಸಬೇಕಿದೆ. ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಯವರು ತಮ್ಮ ಸದಸ್ಯರಿಗೆ ಮತ್ತು ಕಾರ್ಯವ್ಯಾಪ್ತಿಯ ಜನರಿಗೆ ವ್ಯಾಕ್ಸಿನೇಷನ್ ಕೊಡಿಸುವ ಕಾರ್ಯದಲ್ಲಿ ನೆರವಾಗುವುದು. ಆಸ್ಪತ್ರೆಗಳಲ್ಲಿ ತುರ್ತುಚಿಕಿತ್ಸೆಗೆ ವ್ಯವಸ್ಥೆಮಾಡುವುದು ಕೋರೋನಾ ಸೋಂಕಿತ ಕುಟುಂಬಗಳಿಗೆ ಸಾಧ್ಯವಾಗಬಹುದಾದ ಎಲ್ಲ ಅಗತ್ಯ ನೆರವು ನೀಡುವುದು ಆದ್ಯತೆಯ ಕೆಲಸವಾಗಬೇಕಾಗಿದೆ. ತಮ್ಮ ಕಾರ್ಯವ್ಯಾಪ್ತಿಯ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಸರಕಾರವು ಹೊರಡಿಸಿರುವ ಕೋರೋನಾ ನಿಯಮಗಳನ್ನು ಪಾಲಿಸುವಂತೆ ಜನರಲ್ಲಿ ಜಾಗೃತಿ ಮೂಡಿಸುವುದು ವಿಶೇಷವಾಗಿ ಮುಖಕ್ಕೆ ಮಾಸ್ಕಗಳನ್ನು ಕಡ್ಡಾಯವಾಗಿ ಧರಿಸಿ ಕೈಗಳನ್ನು ಆಗಿಂದ್ದಾಗ್ಗೆ ಸ್ಯಾನಿಟೈಸರ್‌ನಿಂದ ಅಥವಾ ಸೋಪಿನಿಂದ ತೊಳೆದುಕೊಳ್ಳುವುದು ಮತ್ತು ಕನಿಷ್ಠ ಅಂತರವನ್ನು ಕಾಪಾಡಿಕೊಳ್ಳುವುದು ಇವುಗಳ ಬಗ್ಗೆ ಕೇವಲ ಜಾಗೃತಿ ವಹಿಸುವುದಷ್ಟೆ ಅಲ್ಲ ಅದರ ಬಗ್ಗೆ ಅಸಡ್ಡೆ ತೊರುವವರಿಗೆ ಅದರಿಂದಾಗುವ ಅನಾಹುತಗಳ ಬಗ್ಗೆ ತಿಳುವಳಿಕೆ ನೀಡುವುದು ಸದ್ಯದ ಅತ್ಯಂತ ಅಗತ್ಯದ ಕ್ರಮ. 2020ರಲ್ಲಿ ದೇಶದಲ್ಲಿ ಕೋರೋನಾ ಮೊದಲನೇಯ ಬಾರಿ ಬಂದಾಗ ಸೌಹಾರ್ದ ಸಹಕಾರಿಗಳು ಸಾಕಷ್ಟು ತೊಂದರೆಗಳನ್ನು ಅನುಭವಿಸಿಯೂ ನಷ್ಟದಲ್ಲಿ ಕೆಲಸ ಮಾಡಿದಾಗ್ಯೂ ಸಹ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿ ತಮ್ಮ ಅಸ್ತಿತ್ವವನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿ ಮಾನವೀಯತೆಯನ್ನು ಮೆರೆದಿರುವುದು ಮರೆಯಲಾಗದ ಸಂಗತಿ. ಮತ್ತೆ ಈ ಬಾರಿಯೂ ಸಹ ಅದೇ ಮಾನವೀಯತೆಯನ್ನು ಮೆರೆಯುವ ಕಾಲ ಪುನಃ ಬಂದಿದೆ. ಬನ್ನಿ ನಾವೆಲ್ಲ ಸೇರಿ ಈ ಮಹಾಮಾರಿಯನ್ನು ಓಡಿಸೋಣ. ಕೋರೋನಾ ಮುಕ್ತರಾಗೋಣ.

**(ಕೊರೋನಾ ವೈರಸ್ ಹರಡದಂತೆ ಜಾಗೃತಿ ವಹಿಸೋಣ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಭಾಗವಹಿಸೋಣ)**

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5-10
ಸರ್ಕಾರದ ಸುತ್ತೋಲೆ ........................ 11-12
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 13-16
ಲೇಖನಗಳು :
ಭಾರತ ಸಂವಿಧಾನದ ಆಶಯ ಹಾಗೂ ಪರಿಚಯ .................................... 21-22
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-13) ................................. 23-24

# ಸಂಪಾದಕೀಯ

## ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯ ಗುರಿ : ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ದಿಟ್ಟ ನಿರ್ಧಾರ

ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆ ವೇಗವಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳು ಎಲ್ಲ ತಾಲ್ಲೂಕುಗಳನ್ನು ಈ ಕ್ಷೇತ್ರ ತಲುಪಿದೆ. ಸೌಹಾರ್ದ ಸಹಕಾರಿಗಳ ಸಂಖ್ಯೆ ಈಗ 5298. ಇವುಗಳಲ್ಲಿ ಸಕ್ರೀಯವಾಗಿರುವುದು 4271. ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ನಮ್ಮ ಕ್ಷೇತ್ರದ ಧ್ಯೇಯ. ಸಂಯುಕ್ತ ಸಹಕಾರಿಯು "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆಗೆ" ಎಂಬ ಘೋಷಣೆಯೊಂದಿಗೆ ಕಾರ್ಯನಿರ್ವಹಿಸುತ್ತ 2019 ನವೆಂಬರ್ ರಿಂದ ಇದುವರೆಗೆ 260 ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಗಳನ್ನು ನಡೆಸಿದೆ. ಸೌಹಾರ್ದ ಸಹಕಾರಿಗಳ ಕಾರ್ಯಾನಿರ್ವಹಣೆ, ಅವಲೋಕನಾ ಮಾಡುವುದರೊಂದಿಗೆ ಸೌಹಾರ್ದ ಸಹಕಾರಿಗಳಲ್ಲಿ ಹಣಕಾಸಿನ ಶಿಸ್ತು ಪಾಲನೆಗಾಗಿ ಸೌಹಾರ್ದ ಸಹಕಾರಿ ಅಧಿನಿಯಮ, ನಿಯಮಗಳು ಹಾಗೂ ಉಪನಿಯಮಗಳು, ಸಂಯುಕ್ತ ಸಹಕಾರಿಯ ಮಾರ್ಗದರ್ಶಿ ಸುತ್ತೋಲೆಗಳಂತೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸುವುದು ಮುಖ್ಯವಾಗಿ ಸದಸ್ಯರ ಠೇವಣಾತಿಗಳ ಹಿತ ರಕ್ಷಣೆ ಹಾಗೂ ನಿಯಮಾನುಸಾರ ಹೂಡಿಕೆಗಳನ್ನು ಮಾಡಿರುವ ಬಗ್ಗೆ ಪರಿಶೀಲಿಸುವ ಜೊತೆಗೆ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಆಗಿರುವ ಆಗಬಹುದಾದ ನಷ್ಟಗಳ ಬಗ್ಗೆ ತೊಂದರೆಗಳ ಬಗ್ಗೆ ನಿವಾರಣೆಗೆ ಸಲಹೆ, ಮಾರ್ಗದರ್ಶನ ಹಾಗೂ ಅಗತ್ಯವಿದ್ದಲ್ಲಿ ಕಾನೂನುಕ್ರಮಗಳನ್ನು ಜಾರಿಮಾಡುವುದು ಈ ಪರಿವೀಕ್ಷಣೆಗಳ ಮುಖ್ಯ ಉದ್ದೇಶವಾಗಿದೆ.

ಸಂಯುಕ್ತ ಸಹಕಾರಿಯ ಈ ಪರಿವೀಕ್ಷಣಾ ಕಾರ್ಯಕ್ಕಾಗಿ ಕೇಂದ್ರ ಕಛೇರಿಯ ಹಿರಿಯ ಹಾಗೂ ಕಿರಿಯ ಅಧಿಕಾರಿಗಳು, ಪ್ರಾಂತೀಯ ಅಧಿಕಾರಿಗಳು, ಜಿಲ್ಲಾಮಟ್ಟದಲ್ಲಿರುವ ಜಿಲ್ಲಾ ಸಂಯೋಜ-ಕರುಗಳನ್ನು ಈ ಕೆಲಸಗಳಿಗಾಗಿ ನಿಯೋಜಿಸಲಾಗಿದೆ. ಸಹಕಾರಿಗಳ ಆಡಳಿತ ಮಂಡಳಿ, ಸಹಕಾರಿಗಳ ಅಧಿಕಾರಿಗಳ ಹಾಗೂ ಸಿಬ್ಬಂದಿಯವರಿಗೆ ಈ ಪರಿವೀಕ್ಷಣೆಗಳಿಂದಾಗಿ ಅವರ ನೈತಿಕ ಹೊಣೆಗಾರಿಕೆ ಹಾಗೂ ಅವರುಗಳು ಸದಸ್ಯರಿಗೆ ಉತ್ತರದಾಯಿತ್ವವನ್ನು ಹೊಂದಿದವರೆಂದು ತಿಳಿಯ ಪಡಿಸಲು ಮತ್ತು ಅವರಿಗೆ ಜ್ಞಾಪಕ ಮಾಡಿಕೊಡುವುದರಲ್ಲಿ ಸಹಕಾರಿಯಾಗಿದೆ ಎಂದು ತಿಳಿದುಕೊಳ್ಳಬಹುದಾಗಿದೆ.

ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಏಪ್ರಿಲ್ 4, 5 ರಂದು ಏರ್ಪಡಿಸಿದ್ದ ಕಾರ್ಯಕ್ಷಮತಾ ಅಭಿವೃದ್ಧಿ ಶಿಬಿರದಲ್ಲಿ ಹಾಗೂ 28.04.2021 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ವರ್ಷ 2021-22 ಮತ್ತು 2022-23ರಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯ ಗುರಿಯನ್ನು ಸಂಯುಕ್ತ ಸಹಕಾರಿಯು ಹೊಂದಿದೆ ಎಂದು ಆಶಿಸಿದ್ದಾರೆ. ಇದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಕಾರ್ಯನಿರ್ವಹಿಸಬೇಕಿದೆ. ಈ ಕಾರ್ಯನಿರ್ವಹಣೆಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಹಕರಿಸಬೇಕು. ಈ ದಿಟ್ಟ ನಡೆಯಿಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ಗುಣಮಟ್ಟ ಸುಧಾರಣೆ ಕಾಣಬಹುದಾಗಿದೆ.

## “ಸದ್ದು ಗದ್ದಲಕ್ಕೆಡೆಗೊಡದೇ ಸೇವಾನಿರತನಾಗು”

ಶ್ರೇಣಿ 61



# ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಸರ್ವದಯಾಳು ವಿಶ್ವದ ತಂದೆ ಭಗವಂತನು ಸರ್ವಜೀವಿಗಳಿಗೆ ಬೇಕಾಗುವ ಎಲ್ಲ ಅವಶ್ಯಕತೆಗಳನ್ನೂ ಸದ್ದು ಗದ್ದಲವಿಲ್ಲದೇ ನಿರಂತರವಾಗಿ ಪ್ರಕೃತಿಯ ಮೂಲಕ “ಕಾಣದ ಕೈ”ಯಾಗಿ ಎಸಗುತ್ತಿದ್ದರೂ ತಾನು ಇವುಗಳೆಲ್ಲವನ್ನು ಮಾಡುತ್ತಿದ್ದೇನೆಂಬಕಿರು ಅಹಮಿಕೆಯನ್ನೂ ಪ್ರದರ್ಶಿಸದೇ ಎಸಗಲ್ಪಡುತ್ತಿರುವ ನೈಸರ್ಗಿಕ ಕ್ರಿಯೆಗಳಾದ ಗಾಳಿಯ ಶುದ್ದೀಕರಣ, ಮರಗಿಡಗಳ ಹೂಹಣ್ಣುಗಳ ಬಿಡುವಿಕೆ, ಭೂಜಲ ತನ್ಮೂಲಕ ಹರಿಯವ ನದಿಗಳು, ಸುರಿದ ಮಳೆ, ಗ್ರಹ ನಕ್ಷತ್ರ ಸೇರಮಂಡಳಗಳ ನಿರಂತರ ಸುತ್ತುವಿಕೆ, ಜೀವಿಗಳ ಜನನ ಮರಣ ಹಸಿವು ಬಾಯಾರಿಕೆಗಳೇ ಅಲ್ಲದೇ ಇಂದಿನ ನಮ್ಮ ಕೃತಕ ಅರ್ಭಟಗಳ ಪ್ರಕ್ರಿಯೆಗಳನ್ನು ವೀಕ್ಷಿಸಿದ ಆಧ್ಯಾತ್ಮ ಕವಿ ಡಿ.ವಿ.ಜಿಯವರು ಮಾಡುವ ಕಾರ್ಯದಲ್ಲಿ ಅನವಶ್ಯಕ ಅಬ್ಬರ ಬೇಡವೆಂದು ಪ್ರಕೃತಿಯಂತೆ ನಿಶ್ಯಬ್ದವಾಗಿ ಕಾರ್ಯಶೀಲನಾಗೆಂದು ಸಂದೇಶ ನೀಡುವ ಈ ಕೆಳಗಿನ ಪದ್ಯವು ಪ್ರಕೃತಿ ಪ್ರಕ್ರಿಯೆಗಳನ್ನು ಉದಾಹರಿಸಿ ಮಾರ್ಮಿಕವಾಗಿ “ ಸದ್ದುಮಾಡುವ ಬದಲು ಬಾಕಿ ಮುಚ್ಚಿಕೊ” ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಪದ್ಯ ಹೀಗಿದೆ.

*ಇಳೆಯಿಂದ ಮೊಳಕೆಯೊಗವೆಂದು ತಮಟೆಗಳಲ್ಲ*
*ಫಲಮಾಗುವಂದು ತುತ್ತೂರಿ ದನಿಯಲ್ಲ*
*ಬೆಳಕೀನ ಚಂದ್ರಿರದೊಂದು ಸದ್ದಿಲ್ಲ*
*ಹೊಲ ನಿನ್ನ ತುಟಿಗಳನು ॥ಮಂಕುತಿಮ್ಮ॥*

ವಾಸ್ತವದ ಚಿತ್ರಣವನ್ನು ಕಣ್ಮುಂದೆ ತಂದಿದ್ದಾರೆ. ಭೂಮಿಯಿಂದ ಮೊಳಕೆಯೊಡೆದಾಗ ಅದರ ಆಗಮನವನ್ನು ತಮಟೆ ಬಡಿದು ಬರಮಾಡಿಕೊಳ್ಳುವುದಿಲ್ಲ. ಹಾಗೆಯೇ ಗಿಡಮರಗಳಲ್ಲಿ ಹೂ ಹಣ್ಣುಗಳು ಬಂದಾಗ ಡೋಲು ಬಾರಿಸಿ ಸಂಭ್ರಮ ಪಡುವುದಿಲ್ಲ. ಜಗತ್ತಿಗೇ ಬೆಳಕು ಕೊಡುವ ಸೂರ್ಯ ಚಂದ್ರರು ಯಾವ ಸದ್ದುಗದ್ದಲವಿಲ್ಲದೇ ತಮ್ಮ ಕಾರ್ಯಗಳಲ್ಲಿ ತೊಡಗಿರುವುದು ನಮಗೆ ಕಾಣುವ ಸತ್ಯದೃಶ್ಯಗಳು.

ಇವುಗಳನ್ನು ವೀಕ್ಷಿಸಿಯೂ ಪ್ರಕೃತಿಯನ್ನು ಸರಿಸದೇ ಆರ್ಭಟ ರಂಪಾಟಕ್ಕೊಳಗಾಗಿರುವ ಮಾನವರಿಗೆ ಈ ಹಿಂದಿನಿಂದಲು ಹಿರಿಯರಿಂದ ಬುದ್ಧಿ ಮಾತುಗಳಾಗಿ ಹೇಳಲ್ಪಟ್ಟಿವೆ.

1. ಎಡಗೈಯಲ್ಲಿ ಕೊಟ್ಟದಾನ ಬಲಗೈಗೆ ಗೊತ್ತಾಗಬಾರದು.
2. ಸಡಗರ ಗದ್ದಲ ಭಾಜಾಭಜಂತ್ರಿಗಳೊಡನೆ ಹಮ್ಮೆಯ ಪ್ರದರ್ಶನ ನೀಡದೇ ಆತ್ಮ ಸ್ಥಿತಿಯ ಅನುಭವ ಮಾಡುತ್ತಾ ನಿಶ್ಶಬ್ದ ಸೇವೆಯಲ್ಲಿ ತೊಡಗು.
3. ಈ ಪ್ರಪಂಚವು ಸುದ್ದಿ ಜಗತ್ತು. ಪ್ರಚಾರದ ಹಂಬಲ ಬಿಟ್ಟುಬಿಡು.
4. ಮೆಚ್ಚುಗೆ ಪುರಸ್ಕಾರಗಳ ಹಂಬಲ ಬಿಡು. ದೈವಕ್ಕೆ ಶರಣಾಗಿ ಕಾರ್ಯನಿರ್ವಹಿಸು.
5. ಪ್ರಕೃತಿ ಸಹಜ ಕ್ರಿಯೆಗಳಂತೆ ಕಾರ್ಯತತ್ಪರನಾಗು ಬೂಟಾಟಿಕೆ ಬೇಡ ಇತ್ಯಾದಿ.

ಈ ಅಂಶವನ್ನೇ ಶಂಕರ ಭಗವತ್ಪಾದರು ತಮ್ಮ “ಭಜಗೋವಿಂದಂ” ಪದ್ಯಗುಚ್ಛದಲ್ಲಿ ಓರ್ವನು ಮಾಡಿದ ಪೂಜಾ ಕೈಂಕರ್ಯವನ್ನು ಉದಾಹರಿಸಿ ಜ್ಞಾನಿಯಾಗೆಂದಿದ್ದಾರೆ. ಪದ್ಯ ಹೀಗಿದೆ.

*ಗಂಗಾಸಾಗರ ತಾಣಕೆ ತೆರಳ ವ್ರತದಾನಗಳನ್ನು ಮಾಡಿದರೇನು*
*ಜ್ಞಾನಿಗಳಲ್ಲದ ಯಾರೇ ಇರಲಿ ಶತಜನ್ಮಕ್ಕೂ ಲಭಿಸದು ಮುಕ್ತಿ.*

ಬೆಳಿಗ್ಗೆ ಎದ್ದಂದಿನಿಂದ ಪ್ರಕೃತಿಯಲ್ಲಿ ನಡೆಯುವ ಕಾರ್ಯಗಳನ್ನು ವೀಕ್ಷಿಸು ಅದರಂತೆ ಮೌನದಿಂದ ಸೇವಾ ನಿರತನಾಗಿ ಕಾರ್ಯ ತತ್ಪರನಾಗಿ ಜಗತ್ತಿನ ಒಳಿತನ್ನೆಸಗು ಎನ್ನುವುದೇ ಈ ಪದ್ಯದ ಸಾರಾಂಶ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 16,900 ಆಗಿರುತ್ತದೆ. ಇವುಗಳ ಪೈಕಿ 9438 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7462.

**ಏಪ್ರಿಲ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 336, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 219.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2899 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 305 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,424 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1022 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 103 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಏಪ್ರಿಲ್ ತಿಂಗಳಿನಲ್ಲಿ 60 ಪ್ರಕರಣ ದಾಖಲಾಗಿರುತ್ತವೆ.

# ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಮಾನ್ಯ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ ಹಾಗೂ ಉಪಾಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಆಯ್ಕೆ

## ಶ್ರೀ ಜಿ.ಟಿ ದೇವೇಗೌಡ, ಮಾನ್ಯ ಶಾಸಕರು ಹಾಗೂ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇವರ ಪರಿಚಯ



ಶ್ರೀ ಜಿ.ಟಿ. ದೇವೇಗೌಡ, ಲೇಟ್ ತಮ್ಮೇಗೌಡ, 71 ವರ್ಷಗಳು, 8ನೇ ತರಗತಿ, ಗುಂಗ್ರಾಲ್ ಛತ್ರ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆಯವರು, ವೃತ್ತಿ ವ್ಯವಸಾಯ, ಪತ್ನಿ ಕೆ. ಲಲಿತ ಜಿ.ಟಿ ದೇವೇಗೌಡ ಇವರು ಕರ್ನಾಟಕ ರಾಜ್ಯ ಪತ್ತಿನ ಮಹಾಮಂಡಳದ ಅಧ್ಯಕ್ಷರಾಗಿರುತ್ತಾರೆ. ಮಗ ಹರೀಶ್ ಜಿ.ಟಿ ದೇವೇಗೌಡ ಇವರು ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿ ಹಾಗೂ ಮೈಸೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿರುತ್ತಾರೆ.

**ಪ್ರಶಸ್ತಿಗಳು :**

- ರಾಜ್ಯ ಸರ್ಕಾರದ ಕೃಷಿ ನಿರ್ದೇಶಕರಿಂದ ವತಿಯಿಂದ ಜಿಲ್ಲೆಯ ಪ್ರಗತಿಪರ ರೈತನೆಂದು ಮನ್ನಣೆ.
- ಸದರಿ ಸಹಕಾರ ಸಂಘದಲ್ಲಿ ಉತ್ತಮ ಸಾಧನೆಗಾಗಿ 1972–73ರ ಕೃಷಿ ಹಣಕಾಸು ವರ್ಷದಲ್ಲಿ ಕೆನರಾ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕರು ಹಾಗೂ ಸಹಕಾರ ಇಲಾಖಾ ವತಿಯಿಂದ ಮೈಸೂರು ವಿಭಾಗದ ಅತ್ಯುತ್ತಮ ಕಾರ್ಯದರ್ಶಿ ಪ್ರಶಸ್ತಿ.
- ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಬೆಂಗಳೂರು ಇವರಿಂದ ಭಾರತ ವಿಕಾಸ ರತ್ನ ಪ್ರಶಸ್ತಿ.
- ದೆಹಲಿಯಲ್ಲಿ ನಡೆದ 2012ರ ಅಂತರಾಷ್ಟ್ರೀಯ ಸಹಕಾರಿ ವರ್ಷಚಾರಣೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ "ಜೀವನ ಶ್ರೇಷ್ಠ ಪ್ರಶಸ್ತಿಯನ್ನು ಮತ್ತು ಸಹಕಾರ ಕ್ಷೇತ್ರದ ರಾಯಭಾರಿ" ಎಂಬ ಬಿರುದು.
- 11.09.2014 ರಂದು ನವದೆಹಲಿಯ ಎನ್.ಸಿ.ಯು.ಐ. ನ ಆಡಿಟೋ–ರಿಯಂನಲ್ಲಿ ನಡೆದ ಕ್ರಿಭ್ಕೋ ಸಂಸ್ಥೆಯ 2013–14ನೇ ಸಾಲಿನ ಸಾಮಾನ್ಯ ಸಭೆಯ ಸಂದರ್ಭದಲ್ಲಿ 'ಸಹಕಾರಿತ ಶಿರೋಮಣಿ' ಪ್ರಶಸ್ತಿ.

**ಸಹಕಾರ ಕ್ಷೇತ್ರ :**

- 1970ರಲ್ಲಿ ಗುಂಗ್ರಾಲ್ ಛತ್ರ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ ಸೇವೆ ಪ್ರಾರಂಭ. ಜೊತೆ ಜೊತೆಗೆ ಸಾಮಾಜಿಕ ಸೇವೆ.
- 1982ರಲ್ಲಿ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ಸಂಘದ ಅಧ್ಯಕ್ಷರಾಗಿ ಸೇವೆ ಆರಂಭ.
- ಮೈಸೂರು ತಾಲ್ಲೂಕು ಎಪಿಎಂಸಿ ಚುನಾವಣೆಯಲ್ಲಿ ಗೆಲುವು, ಉಪಾಧ್ಯಕ್ಷರಾಗಿ ಆಯ್ಕೆ.
- 1992ರಿಂದ ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕರಾಗಿ ಸೇವೆ.
- ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ನಿರಂತರವಾಗಿ ಆಯ್ಕೆ.
- ನಂತರ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಆಯ್ಕೆ.
- ಅನಂತರ ಮೈಸೂರು ವಿಭಾಗದಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಆಯ್ಕೆ.
- 1995–98ರ ಅವಧಿಯಲ್ಲಿ ಮೂರುವರೆ ವರ್ಷಗಳ ಕಾಲ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಸೇವೆ.
- ರಾಷ್ಟ್ರೀಯ ಸಹಕಾರ ಯೂನಿಯನ್‌ನ ನಿರ್ದೇಶಕರಾಗಿ ಸೇವೆ.
- 2006 ರಿಂದ 2013 ರವರೆಗೆ ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ.

**ರಾಜಕೀಯ ಕ್ಷೇತ್ರ :**

- 1987ರಲ್ಲಿ ರಾಜ್ಯದಲ್ಲಿ ಪ್ರಪ್ರಥಮವಾಗಿ ನಡೆದ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಇಲವಾಲ ಕ್ಷೇತ್ರದಿಂದ ಸ್ಪರ್ಧೆ ಮತ್ತು ವಿಜಯ.
- ಜಿಲ್ಲಾ ಪರಿಷತ್ ಆಡಳಿತ ಪಕ್ಷದ ನಾಯಕನಾಗಿ, ಹಣಕಾಸು ಮತ್ತು ಕಾಮಗಾರಿ ಸಮಿತಿಗಳಲ್ಲಿ ಸದಸ್ಯನಾಗಿ ಕಾರ್ಯನಿರ್ವಹಣೆ.
- 1987–90ರ ಅವಧಿಯಲ್ಲಿ ಜಿಲ್ಲಾ ಯುವ ಜನತಾದಳದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಣೆ.
- 1989–90ರಲ್ಲಿ ಮೈಸೂರು ತಾಲ್ಲೂಕು ಪಂಚಾಯತ್ ಅಧ್ಯಕ್ಷರಾಗಿ ಸೇವೆ.
- 1995–97ರ ಅವಧಿಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಸೇವೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಪರಿಣಾಮಕಾರಿ ಜಾರಿಗೆ ಯಶಸ್ವಿ ಪ್ರಯತ್ನ.
- 26.04.2004ರಂದು ನಡೆದ ಚುನಾವಣೆಯಲ್ಲಿ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಮರುಸ್ಪರ್ಧೆ– 14,132 ಮತಗಳ ಅಂತರದಿಂದ ಶಾಸಕರಾಗಿ

ಆಯ್ಕೆ.

- 25.01.07 ರಂದು ಕರ್ನಾಟಕ ಸರ್ಕಾರದ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ,
- 11.02.07 ರಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕ.
- 08.10.07 ರವರೆಗೆ ಕರ್ನಾಟಕ ಸರ್ಕಾರದ ಸಹಕಾರ ಸಚಿವರಾಗಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೇವೆ.
- 02.07.08 ರಂದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರಿಸಿ ಸೇವೆ.
- 2013ರ ಫೆಬ್ರವರಿ 19ರಲ್ಲಿ ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರ ಸ್ಥಾನಕ್ಕೆ ರಾಜಿನಾಮೆ.
- ದಿನಾಂಕ 06.06.2018 ರಂದು ಕರ್ನಾಟಕ ಸರ್ಕಾರ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ.
- ದಿನಾಂಕ 22.06.2018ರಂದು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾಗಿ ನೇಮಕ.
- ಆಗಸ್ಟ್ ತಿಂಗಳಿನಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

## ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು. ಹಾಗೂ ಮಾನ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಪರಿಚಯ



ಚಿಕ್ಕೋಡಿಯ ಕವಟಗಿಮಠ ಮನೆತನ ಕಳೆದ 3 ತಲೆಮಾರುಗಳಿಂದ ವೈವಿಧ್ಯಮಯವಾದ ಸೇವಾ ಕ್ಷೇತ್ರಗಳಿಂದ ಗುರುತಿಸಿಕೊಂಡಿರುವ ಮನೆತನ. ಸುಸಂಸ್ಕೃತ ಕೃಷಿ ಕುಟುಂಬ. ಈ ಮನೆತನದಲ್ಲಿ 1970ರ ಮೇ 09 ಜಗದೀಶರ ಜನ್ಮದಿನ. ಬಿ.ಎ.ಎಲ್. ಎಲ್.ಬಿ. ಪದವೀಧರರಾಗಿರುವ ಶ್ರೀಯುತರು ತಮ್ಮ ಪೂಜ್ಯ ತಂದೆಯವರಾದ ದಿ. ಶ್ರೀ ಎಂ.ಕೆ ಕವಟಗಿಮಠರವರು ಅವರ ಅಜ್ಜ ದಿವಂಗತ ಕಲ್ಲಯ್ಯಸ್ವಾಮಿಗಳು ತಂದೆ ಶ್ರೀ ದಿವಂಗತ ಶ್ರೀ ಮಲ್ಲಯ್ಯ ಸ್ವಾಮಿಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಿರುವ ಪ್ರಗತಿಪರ ಯುವ ಸಹಕಾರಿ. ಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಬೆಳಗಾವಿ ವಿಭಾಗದಿಂದ ಆಯ್ಕೆಯಾಗಿರುವ ಶ್ರೀಯುತರು ಅವಿರೋಧವಾಗಿ ಉಪಾಧ್ಯಕ್ಷರಾಗಿದ್ದಾರೆ. ಇವರ ತಂದೆಯವರು ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪ್ರವರ್ತಕರಾಗಿ ಸಹಕಾರ ತತ್ವಗಳ ಅನುಷ್ಠಾನದ ಪ್ರವೃತ್ತಿಯನ್ನು ಕುಟುಂಬದಲ್ಲಿ ಬೆಳೆಸಿದವರು.

ಶ್ರೀಯುತರು ಶ್ರೀ ಸಿದ್ಧೇಶ್ವರ ಹಾಲು ಉತ್ಪಾದಕರ ಸಹಕಾರಿ ಸಂಘದ ಚಿಕ್ಕೋಡಿಯ ನಿರ್ದೇಶಕರಾಗಿ, ಜಿಲ್ಲಾ ಸಹಕಾರಿ ಯೂನಿಯನ್ ಬೆಳಗಾವಿಯ ಉಪಕಾರ್ಯಾಧ್ಯಕ್ಷರಾಗಿ, ಶ್ರೀ ನಾಗಲಿಂಗೇಶ್ವರ ಹೌಸಿಂಗ್ ಸೊಸಾಯಿಟಿ ಚಿಕ್ಕೋಡಿಯ ನಿರ್ದೇಶಕರಾಗಿ, ಕೆ.ಎಲ್.ಇ. ಕಾನೂನು ಮಹಾವಿದ್ಯಾಲಯ ಚಿಕ್ಕೋಡಿ ಇದರ ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಚಿಕ್ಕೋಡಿ ತಾಲ್ಲೂಕಾ ಘಟಕದ ಕೋಶಾಧ್ಯಕ್ಷರಾಗಿ, ಸಿ.ಎಲ್.ಇ. ಸಂಸ್ಥೆಯ ಹಳೆಯ ವಿದ್ಯಾರ್ಥಿ ಬಳಗದ ಸಂಸ್ಥಾಪಕ ಅಧ್ಯಕ್ಷರಾಗಿ, ಚಿಕ್ಕೋಡಿ ಪುರಸಭೆಯ ಅಧ್ಯಕ್ಷರಾಗಿ, ಸದಸ್ಯರಾಗಿ ಜೊತೆಗೆ ಹಲವಾರು ಸಂಘ ಸಂಸ್ಥೆಗಳಿಗೆ ಪದಾಧಿಕಾರಿಗಳಾಗಿ ಪ್ರೇರಕರಾಗಿ ಅವರು ಸಲ್ಲಿಸುತ್ತಿರುವ ಸೇವೆ ಅತ್ಯಂತ ಸ್ಮರಣೀಯವಾಗಿದೆ.

ಚಿಕ್ಕೋಡಿಯ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿರುವ ಶ್ರೀಯುತರು ಸಾಯಿ ಪರಿವಾರದ ಮೂಲಕ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹ, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳ ಹಂಚಿಕೆ, ಸಾಯಿ ಮಂದಿರದ ವಾರ್ಷಿಕೋತ್ಸವದ ಕಾಲಕ್ಕೆ ಮೂರು ದಿನಗಳ ಮಟ್ಟಿಗೆ ಹಮ್ಮಿಕೊಳ್ಳುವ ವಿವಿಧ ವಿಧಾಯಕ ಕಾರ್ಯಕ್ರಮಗಳು ಈ ಭಾಗದ ಜನರ ಮನ, ಮನೆಗಳಿಗೆ ಮೆಚ್ಚುಗೆಯಾಗಿವೆ. ಕಳೆದ 15 ವರ್ಷಕ್ಕೂ ಮಿಕ್ಕಿ ಕನ್ನಡ ಸಾಹಿತ್ಯ ಪರಿಷತ್ತು ಈ ಗಡಿಭಾಗದಲ್ಲಿ ಸಕ್ರಿಯವಾಗಿರುವುದರ ಜೊತೆಗೆ ಅದು ಹಲವು ಕಾರ್ಯಕ್ರಮಗಳನ್ನು ಹಾಗೂ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಇವರು ಪ್ರೇರಕರಾಗಿದ್ದಾರೆ. ಇಂದು ಈ ಭಾಗದಲ್ಲಿ ಯಾವುದೇ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾದರೆ ಅದಕ್ಕೆ ಇವರ ಉಪಸ್ಥಿತಿ, ಮಾರ್ಗದರ್ಶನ, ಮುಖಂಡತ್ವ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಶ್ರೀಯುತರು ತೊಡಗಿಸಿಕೊಂಡಿದ್ದಾರೆ. ಶ್ರೀಯುತರು ದಿ.ಚಿಕ್ಕೋಡಿ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿ., ನಿಪ್ಪಾಣಿ ಇದರ ಅಧ್ಯಕ್ಷರಾಗಿ ಕಳೆದ ಎರಡು ಅವಧಿಗಳಿಗೆ ಇದನ್ನು ಮುನ್ನಡೆಸುತ್ತಿದ್ದಾರೆ. ದಾಖಲೆ ಪ್ರಮಾಣದ ಲಾಭಗಳಿಕೆಯನ್ನು ಇದಕ್ಕೆ ತಂದು ಕೊಟ್ಟಿದ್ದಾರೆ. ಸಂಘದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆದಿದ್ದಾರೆ. ಚಿಕ್ಕೋಡಿಯ ರಾಜೀವನಗರದ ನಿವೇಶನದಲ್ಲಿ ಇಂಡಿಯನ್ ಆಯಿಲ್ ಡೀಲರ್‌ಶೀಪ್‌ನ್ನು ಪಡೆಯುವುದರ ಮೂಲಕ ಸಂಘವು ಪೆಟ್ರೋಲ್ ಪಂಪ್ ನಡೆಸಲು ಕಾರಣೀಭೂತರಾಗಿದ್ದಾರೆ.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ "ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ"

## ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಅಭಿವೃದ್ಧಿಯಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಪಾತ್ರ ಮಹತ್ವದ್ದು – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ



ಉದ್ಘಾಟನೆ : ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ವಾರ್ಷಿಕ ಕಾರ್ಯಕ್ರಮದಂತೆ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರವನ್ನು ದಿನಾಂಕ 3, 4 ಏಪ್ರಿಲ್ 2021 ರಂದು ಏರ್ಪಡಿಸಲಾಗಿತ್ತು. ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಪ್ರಮುಖ ಪಾತ್ರವನ್ನು ವಹಿಸಬೇಕಿದೆ. "ಸಂಯುಕ್ತ ಸಹಕಾರಿಯ ನಡೆ ಗುಣಮಟ್ಟದ ಕಡೆ" ಎಂಬ ಘೋಷಣೆಯನ್ನು ಸಂಯುಕ್ತ ಸಹಕಾರಿಯು ಅಕ್ಷರಶಃ ಸತ್ಯವಾಗಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅದರಲ್ಲಿ ಪ್ರಮುಖವಾಗಿ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ಅವರ ಠೇವಣಿಯನ್ನು ಹಿಂದಿರಿಗಿಸುವಲ್ಲಿ ವಿಫಲರಾಗಿರುವ ಕೆಲವು ಸಂದರ್ಭಗಳಲ್ಲಿ ಸಂಯುಕ್ತ ಸಹಕಾರಿಯು ಅಂತಹ ಸೌಹಾರ್ದ ಸಹಕಾರಿಗಳನ್ನು ಸಂಪರ್ಕಿಸಿ ಠೇವಣಿದಾರರಿಗೆ ಠೇವಣಿಯನ್ನು ವಾಪಸ್ಸು ಮಾಡಿಸುವ ಕ್ರಮವಿಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು "ಟಾಸ್ಕ ಫೋರ್ಸ' ಸಂಯುಕ್ತ ಸಹಕಾರಿಯ ವಿಶೇಷ ಪಡೆ" ಯನ್ನು ರಚಿಸಲಾಗಿದೆ. ಶ್ರೀ ನಾರಾಯಣ ಹೆಗಡೆಯವರು ಬೆಂಗಳೂರು ಹಾಗೂ ಮೈಸೂರು ವಿಭಾಗದ ಸಮಸ್ಯಾತ್ಮಕ ಸಹಕಾರಿಗಳ ಹಾಗೂ ಶ್ರೀ ಶ್ರೀಕಾಂತ ಬರುವೆಯವರು ಬೆಳಗಾವಿ ಹಾಗೂ ಕಲಬುರಗಿ ವಿಭಾಗದ ಸಮಸ್ಯಾತ್ಮಕ ಸಹಕಾರಿಗಳ ಉಸ್ತುವಾರಿಯನ್ನು ವಹಿಸಲಾಗುತ್ತಿದೆ ಅವರುಗಳಿಗೆ ಎಲ್ಲ ಜಿಲ್ಲಾ ಸಂಯೋಜಕರು ಅಗತ್ಯ ಸಹಕಾರ ನೀಡಿ ಈ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಪ್ರಯತ್ನಿಸುವುದು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಬೆಂಗಳೂರು, ಬೆಳಗಾವಿ ಕಟ್ಟಡಗಳ ಪ್ರಗತಿ ಕಲಬುರಗಿ ವಿಭಾಗೀಯ ಕಛೇರಿಗೆ ಕಟ್ಟಡ ಪ್ರಾರಂಭಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಮುಂತಾದ ವಿವರಗಳನ್ನು ನೀಡಿ ಸಂಯುಕ್ತ ಸಹಕಾರಿಯ ಇದುವರೆಗಿನ ಎಲ್ಲ ಪ್ರಗತಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಸಹಕರಿಸಿರುವುದಕ್ಕೆ ಉತ್ತಮವಾಗಿ ಕಾರ್ಯನಿರ್ವಹಿಸಿರುವುದಕ್ಕೆ ಎಲ್ಲರನ್ನು ಮುಕ್ತ ಕಂಠದಿಂದ ಅಭಿನಂದಿಸಿದರು.

ಪ್ರಾಸ್ತಾವಿಕ : ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಪ್ರಾರಂಭದಲ್ಲಿ ವೀರಶೆಟ್ಟಿಯವರಿಂದ ಸಹಕಾರ ಗೀತೆಯ ಸಾಮೂಹಿಕವಾಗಿ ಹೇಳಿದ ನಂತರ ಶ್ರೀಮತಿ ಆಶ್ವಿನಿಯವರಿಂದ ಪ್ರಾರ್ಥನೆ. ಶ್ರೀ ಶ್ರೀಕಾಂತ ಬರುವೆಯವ–ರಿಂದ ಸ್ವಾಗತ ನೆರವೇರಿತು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕ ಭಾಷಣ ಮಾಡುತ್ತ ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ತನ್ನ ಸಿಬ್ಬಂದಿಯವರನ್ನು ಸಹಕಾರ ಕ್ಷೇತ್ರದ ಪ್ರಸಕ್ತ ವಿಷಯಗಳ ಬಗ್ಗೆ ಮಾಹಿತಿ ನೀಡುವ ಅವರನ್ನು ಪ್ರೇರೇಪಿಸುವ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವರ್ಷದಲ್ಲಿ 2 ಬಾರಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದರು.

ಕಾರ್ಯಕ್ರಮದ ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎ.ಆರ್.ಪ್ರಸನ್ನಕುಮಾರ ಶ್ರೀ ಮಂಜುನಾಥ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಉಪಸ್ಥಿತರಿದ್ದರು. ಚಾರ್ಟರ್ಡ ಅಕೌಂಟಂಟ ಶ್ರೀ ಮಧುಕರ ಹೆಗಡೆ ಉಪಸ್ಥಿತರಿದ್ದರು.

## ಸಹಕಾರಿಗಳ ಲೆಕ್ಕ ಪರಿಶೋಧನಾ ವರದಿಗಳ ಹಾಗೂ ಹಣಕಾಸು ಸ್ಥಿತಿಗಳ ಪರಿಶೀಲನೆ – ಶ್ರೀ ಮಧುಕರ ಹೆಗಡೆ

ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳ ಪರಿಶೀಲನೆ ಹಾಗೂ ಸಹಕಾರಿಗಳ ಹಣಕಾಸಿನ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವಾಗ ಯಾವ ವಿವರಗಳನ್ನು ಹೇಗೆ ನೋಡಬೇಕು ಎಂದು ವಿವರವಾಗಿ ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎ.ಆರ್.ಪ್ರಸನ್ನಕುಮಾರ ಹಾಗೂ ಶ್ರೀ ಮಂಜುನಾಥ ರವರಿಂದ ವಿಚಾರಗಳ ಮಂಡನೆ ಹಾಗೂ ಮಾರ್ಗದರ್ಶನ.

## ಶ್ರೀ ಗುರುನಾಥ ಜ್ಯಾಂತಿಕರ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ತರಬೇತಿ ಕಾರ್ಯಕ್ರಮದ ಎರಡನೇಯ ದಿನದಲ್ಲಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಗುರುನಾಥ ಜ್ಯಾಂತಿಕರರವರು ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕಾಗಿಯೇ ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸುತ್ತ ಬಂದಿದೆ. ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ನಿರಂತರ ಕೆಲಸ. ಕ್ಷೇತ್ರದ ಪರಿಚಯವಿಲ್ಲದಿರುವವರಿಗೆ ಏನೂ ಕೆಲಸವಿರುವುದಿಲ್ಲ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಗುಣಮಟ್ಟದ ಕಡೆಗೆ ತೆಗೆದುಕೊಂಡು ಹೋಗುವ ಪ್ರಯತ್ನದಲ್ಲಿ ತಮ್ಮ ಆರೋಗ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡುವುದು ಅಗತ್ಯ ಎಲ್ಲ ಭಾಗ್ಯಕ್ಕಿಂತ ಆರೋಗ್ಯ ಭಾಗ್ಯ ಮಹತ್ವದ್ದು. ಆರೋಗ್ಯವಿದ್ದರೆ ಎಲ್ಲ. ಆದ್ದರಿಂದ ಪ್ರತಿ ದಿನ ಆರೋಗ್ಯ ನಿರ್ವಹಣೆಗಾಗಿ ಪ್ರತಿದಿನ ಯೋಗ ಪ್ರಾಣಾಯಾಮ ಧ್ಯಾನಗಳನ್ನು ಮಾಡುವುದನ್ನು ಅಭ್ಯಾಸ ಮಾಡುವುದು ಅಗತ್ಯ. ಎಂದು ತಿಳಿಸುತ್ತ ಸೌಹಾರ್ದ ಸಹಕಾರಿ ಅಧಿಕಾರಿಗಳು ಸಹಕಾರಿಗಳ ಪರಿವೀಕ್ಷಣೆ ಮಾಡುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರವಾಗಿ ತಿಳಿಸಿದರು. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಸ್ನೇಹಿತರಂತೆ ಇದ್ದು ನಿರಂತರ ಅವರ ಸಂಪರ್ಕವನ್ನು ಹೊಂದುತ್ತಿರಬೇಕು ಕೆಲಸವನ್ನು ಆನಂದಿಸಬೇಕು. ಕೆಲಸವನ್ನು ಒಂದು ಹೊರೆಯಂತೆ ಕಾಣಬಾರದು ಎಂದು ತಿಳಿಸಿದರು.

## ಶ್ರೀ ವಿಶ್ವನಾಥ ಹಿರೇಮಠ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಕಾರ್ಯಕ್ಷಮತೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಮತ್ತು ಅವರುಗಳ ಕೆಲಸಕಾರ್ಯಗಳ ಮೇಲೆ ಅವಲಂಬಿತವಾಗುತ್ತದೆ. ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅಧ್ಯಯನ ಅಗತ್ಯ. ವಿಶೇಷವಾಗಿ ಕಾಯ್ದೆ, ನಿಯಮಗಳು ಹಾಗೂ ಉಪನಿಯಮಗಳ ಸಂಪೂರ್ಣ ಜ್ಞಾನ ಮತ್ತು ಮನನಮಾಡಿಕೊಳ್ಳುವ ಪ್ರವೃತ್ತಿ ಇರಬೇಕು. ಸಂಸ್ಥೆಗೆ ತನ್ನ ಕೊಡುಗೆಯನ್ನು ಕೊಡುವವರಾಗಿರಬೇಕು. ಸಂಸ್ಥೆಯ ಬಗ್ಗೆ ಸದಾ ಗೌರವದಿಂದ ನಡೆಕೊಳ್ಳುವ ಆಂತರಿಕೆ ವಿಷಯಗಳ ನಿರ್ವಹಣೆಯನ್ನು ಉತ್ತಮವಾಗಿ ನಿರ್ವಹಿಸುವ ಪ್ರವೃತ್ತಿ ಇರಬೇಕು ಮತ್ತು ಸಹಕಾರಿಯ ಮತ್ತು ಸಹಕಾರ ಕ್ಷೇತ್ರದ ಅಗತ್ಯ ಮಾಹಿತಿ ಮತ್ತು ಅಂಕಿ ಸಂಖ್ಯೆಗಳನ್ನು ಯಾವಾಗಲೂ ತಿಳಿದಿರಬೇಕು. ಸಂಯುಕ್ತ ಸಹಕಾರಿಯಲ್ಲಿ ಅಥವಾ ಸೌಹಾರ್ದ ಸಹಕಾರಿಗಳಾಗಲಿ ಉತ್ತಮ ಸಾಫ್ಟ್‌ವೇರ ಇರಬೇಕು. ಇದರಿಂದಾಗಿ ಉತ್ತಮ ನಿಯಂತ್ರಣದ ಜೊತೆಗೆ ಕೆಲಸ ಕಾರ್ಯಗಳು ಉತ್ತಮವಾಗಿ ನಡೆಯುವುದರ ಜೊತೆಗೆ ಪಾರದರ್ಶಕವಾಗಿ ವೃತ್ತಿಪರವಾಗಿ ಸಕಾಲದಲ್ಲಿ ನಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

## ಶ್ರೀ ಪ್ರಸನ್ನಕುಮಾರ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರು ಹಾಗು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಗೆಳೆಯ, ತತ್ವಜ್ಞಾನಿ ಹಾಗೂ ಮಾರ್ಗದರ್ಶಿಯಂತೆ ಕೆಲಸ ಮಾಡಬೇಕು. ತರಬೇತಿಗಳಲ್ಲಿ ಗುಣಮಟ್ಟದ ಕೊರತೆ ಆಗಬಾರದು. ತರಬೇತಿ ಕಾರ್ಯಕ್ರಮಗಳ ಮೌಲ್ಯಮಾಪನವಾಗಬೇಕು. ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವಾಗ ಸಾಕಷ್ಟು ಒತ್ತಡಗಳು ಬರುತ್ತವೆ. ಅವೆಲ್ಲವುಗಳನ್ನು ಸಕಾರಾತ್ಮವಾಗಿ ಸ್ಪಂದಿಸಬೇಕು. ವೃತ್ತಿ ಸಂಸ್ಕೃತಿ ಬೆಳೆಸಿಕೊಂಡು ಪಾರದರ್ಶಕತೆಯಿಂದ ವೃತ್ತಿಪರರಾಗಿ ಕಾರ್ಯನಿರ್ವಹಿಸಬೇಕು ಇದರಿಂದಾಗಿ ಈ ಕ್ಷೇತ್ರ ಗುಣಮಟ್ಟದ್ದಾಗಿ ಬೆಳೆಯುತ್ತದೆ ಹಾಗೂ ನಿಮ್ಮ ವ್ಯಕ್ತಿತ್ವವೂ

ವಿಕಸನವಾಗುತ್ತದೆ ಎಂದು ತಿಳಿಸಿದರು.

**ಶ್ರೀ ಮಂಜುನಾಥ, ಮಾನ್ಯ ನಿರ್ದೇಶಕರು,**

**ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಸಹಕಾರ ಕ್ಷೇತ್ರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಸಾಧನೆಯಲ್ಲಿ ಇದೊಂದು ಅದ್ಭುತ ಕಲ್ಪನೆ. ನಮ್ಮ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಿಗೆ ಕ್ಷೇತ್ರದ ವಾರಿಯರ್ಸ ಇದ್ದ ಹಾಗೆ. ಅವರುಗಳ ಜ್ಞಾನದ ಮಟ್ಟ ಹೆಚ್ಚಳಿಕ್ಕೆ ಇಂತಹ ಕಾರ್ಯಕ್ರಮಗಳು ಅಗತ್ಯ. ಅವರುಗಳು ಸಹ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ನಿರಂತರ ನಡೆಯಬೇಕು. ಅವರೊಂದು ಗೂಗಲ್ ಮಾಸ್ಟರ್ ನಂತೆ ಯಾವ ಮಾಹಿತಿಯನ್ನು ಕೇಳಿದರೂ ಸಿಗುವಂತಹ ಜ್ಞಾನಕೋಶವಾಗಬೇಕು. ಸಮಾಜ ಗುರುತಿಸುವ ವ್ಯಕ್ತಿಯಾಗಿ ಬೆಳೆಯಬೇಕು ಮತ್ತು ಸೌಹಾರ್ದ ಸಹಕಾರಿಯ ಅಧಿಕಾರಿಗಳು ಸಾಮಾಜಿಕ ಕ್ರಾಂತಿಯ ಹರಿಕಾರರು ಎಂಬ ಹೆಸರು ಎಲ್ಲೆಡೆ ಕೇಳಬರುವಂತಾಗಬೇಕು. ಸಂಯುಕ್ತ ಸಹಕಾರಿಯ ಒಬ್ಬ ಯಶಸ್ವಿ ಅಧಿಕಾರಿಯಾಗಿ ಗುರುತಿಸುವಂತಾಗಬೇಕು ಮತ್ತು ಸ್ವತಃ ಒಬ್ಬ ಸಂಪನ್ಮೂಲ ವ್ಯಕ್ತಿಯಾಗಿ ಬೆಳೆಯಬೆಕು ಎಂದು ತಿಳಿಸಿದರು.

ನಂತರ ಶ್ರೀಯುತ ಭಾಸ್ಕರ ಹೆಗಡೆ ಕಾಗೇರಿಯವರು ವೃತ್ತಿ ಜೀವನ ಮತ್ತು ವ್ಯಯಕ್ತಿಕ ಜೀವನಗಳ ನಿರ್ವಹಣೆ ಸಮಯ ನಿರ್ವಹಣೆ ಮತ್ತು ಒತ್ತಡ ನಿರ್ವಹಣೆಯನ್ನು ಯಶಸ್ವಿಯಾಗಿ ಹೇಗೆ ನಿರ್ವಹಿಸಲು ಸಾಧ್ಯ ಎಂಬ ಬಗ್ಗೆ ಉಪನ್ಯಾಸ ನೀಡಿದರು.

**ಸಕಾರಾತ್ಮ ಚಿಂತನೆ ಹಾಗೂ ಸ್ಮಾರ್ಟವರ್ಕ ಅನುಭವ ವಿನಿಮಯ :**

ಜಿಲ್ಲಾ ಸಂಯೋಜಕರುಗಳಾದ ಶ್ರೀ ಗಂಗಾರಾಮ, ಶ್ರೀ ವೃಷಭನಾಥ, ಶ್ರೀ ವೀರಶೇಟ್ಟಿ, ಶ್ರೀ ಬಿ.ಎಸ್.ವಿಜಯ, ಶ್ರೀ ಚಂದ್ರಶೇಖರಯ್ಯ, ಶ್ರೀ ಶಶಿಕುಮಾರ ಇವರುಗಳಿಂದ ಸಕಾರಾತ್ಮ ಸ್ಪಂದನೆ ಹಾಗೂ ಸ್ಮಾರ್ಟ ವರ್ಕಗಳಿಂದ ತಾವುಗಳು ಕ್ಷೇತ್ರದಲ್ಲಿ ಸಾಧಿಸಿರುವ ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳು ಮತ್ತು ಅದರಿಂದಾಗಿ ತಮ್ಮ ವ್ಯಯಕ್ತಿಕ ವ್ಯಕ್ತಿತ್ವದ ವಿಕಸನವಾಗಿರುವ ಬಗ್ಗೆ ದೃಷ್ಟಾಂತಗಳೊಂದಿಗೆ ವಿವರಗಳನ್ನು ನೀಡಿದರು.

**ಮಾರ್ಗದರ್ಶಿ ಉಪನ್ಯಾಸ ಹಾಗೂ ಸಮಾರೋಪ :**

**ಶ್ರೀ ಶರಣಗೌಡ ಜಿ. ಪಾಟೀಲ**

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ಕಳೆದೆರಡು ದಿನಗಳಿಂದ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಬಹಳ ಉತ್ತಮವಾಗಿ ಸಕ್ರೀಯವಾಗಿ ಭಾಗವಹಿಸಿ ಈ ಕಾರ್ಯಕ್ರಮತೆ ಅಭಿವೃದ್ಧಿ ಶಿಬಿರವನ್ನು ಯಶಸ್ವಿಗೊಳಿಸಿರುವುದಕ್ಕೆ ದಣ್ಯವಾದಗಳನ್ನು ಸಲ್ಲಿಸುತ್ತ ಸಂಯುಕ್ತ ಸಹಕಾರಿ ಮುಂದಿನ ವರ್ಷದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ವ್ಯಕ್ತಪಡಿಸಿದಂತೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ಮಾಡುವ ಗುರಿಯನ್ನು ಹೊಂದಿ ಕಾರ್ಯನಿರ್ವಹಿಸುವ ಅಗತ್ಯ ಇದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳನ್ನು ತಲುಪಿ ಕಾರ್ಯ ನಿರ್ವಹಿಸಿದಾಗ ನಾವುಗಳು ಗೆಳೆಯ, ತತ್ವಜ್ಞಾನಿ ಹಾಗು ಮಾರ್ಗದರ್ಶಿಯಂತೆ ಕಾರ್ಯನಿರ್ವಹಿಸಿದಂತಾಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಉತ್ತಮವಾಗುತ್ತದೆ. ಕ್ಷೇತ್ರದ ಅಭಿವೃದ್ಧಿಯಾಗುತ್ತದೆ. ಈ ಕ್ಷೇತ್ರದ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಸರಕಾರದಲ್ಲಿ ಹೆಚ್ಚಿನ ವಿಶ್ವಾಸಾರ್ಹತೆ ಬೆಳೆಯಲು ಸಾಧ್ಯವಾಗುತ್ತದೆ. ಸೌಹಾರ್ದ ಸಹಕಾರಿಗಳಲ್ಲಿ ಮತ್ತು ಕ್ಷೇತ್ರ ಸಿಬ್ಬಂದಿಯವರು ತಮ್ಮ ತಮ್ಮ ಜಿಲ್ಲೆಗಳ ಸಂಪೂರ್ಣ ಅಂಕಿಅಂಶಗಳನ್ನು ಸಂಗ್ರಹಿಸಬೇಕು. ಮತ್ತು ತಾವುಗಳು ನಿರ್ವಹಿಸುವ ಕಾರ್ಯಗಳ ಬಗ್ಗೆ ಮತ್ತು ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ಉತ್ತಮ ದಾಖಲಾತಿಗಳನ್ನು ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಮತ್ತು ನಿರಂತರ ಕ್ರೀಯಾಶೀಲರಾಗಿರಬೇಕು ಎಂದು ತಿಳಿಸಿದರು.

**ವಂದನಾರ್ಪಣೆ :**

ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಅಧಿಕಾರಿ ಶ್ರೀ ಶಿವಕುಮಾರ ಬಿರಾದರ ಇವರು ಎಲ್ಲ ಗಣ್ಯರಿಗೆ ಹಾಗೂ ಭಾಗವಹಿಸಿದ ಪ್ರತಿನಿಧಿಗಳಿಗೆ ವಂದನೆಗಳನ್ನು ಸಲ್ಲಿಸಿದರು.

**ಕ್ರೀಡಾ ವಿಜೇತರಿಗೆ ಬಹುಮಾನಗಳ ವಿತರಣೆ :**

ಎರಡು ದಿನಗಳ ಕಾರ್ಯಕ್ರಮತೆ ಅವಧಿಯಲ್ಲಿ. ಕ್ರೀಕೆಟ್, ಕೋಕೋ, ಬ್ಯಾಡ್ಮಿಂಟನ್, 3 ಕಾಲುಗಳ ಓಟ, 200 ಮೀಟರ ಓಟ, ಚೆಸ್ಸ್, ಟೇಬಲ್ ಟೆನ್ನಿಸ್, ಸ್ವಿಮಿಂಗ್ ಹಾಗೂ ಮ್ಯುಸಿಕಲ್ ಚೇರ್ ಕ್ರೀಡೆಗಳನ್ನು ವ್ಯವಸ್ಥೆ ಮಾಡಲಾಗಿತು. ಕ್ರೀಡೆಗಳಲ್ಲಿ ವಿಜೇತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ರವರು ಬಹುಮಾನಗಳನ್ನು ನೀಡಿದರು.

## ಸ್ವಾಭಿಮಾನಿ ಸಹಕಾರಿ ಚಂದಾದಾರರು ಹಾಗೂ ಓದುಗರಲ್ಲಿ ವಿನಂತಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿರುವುದು ತಮಗೆಲ್ಲಾ ತಿಳಿದ ವಿಷಯ. ಕೋವೀಡ್–19 ಎರಡನೇ ಅಲೆ ಕೊರೋನಾ ಮಹಾಮಾರಿಯ ಕಾರಣದಿಂದಾಗಿ ಮೇ ತಿಂಗಳ ಸಂಚಿಕೆಗಳನ್ನು ಮುದ್ರಿಸಲು ಸಾಧ್ಯವಾಗಿರುವುದಿಲ್ಲ. ಈ ಪತ್ರಿಕೆಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಹಾಗೂ whats app ಗ್ರೂಪ್‌ಗಳ ಮೂಲಕ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಚಂದಾದಾರರು ಹಾಗೂ ಓದುಗರು ಸಹಕರಿಸಲು ಕೋರಿದೆ.

– ಸಂಪಾದಕರು

## ಸದಸ್ಯ ಸಹಕಾರಿಗಳ ಮಾಹಿತಿಗಾಗಿ

ಕೋವಿಡ್–19 2ನೇ ಅಲೆ ನಿಮಿತ್ತವಾಗಿ ರಾಜ್ಯದಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಒಂದನೇಯ ತ್ರೈಮಾಸಿಕ ತರಬೇತಿ ಕಾರ್ಯಕ್ರಮಗಳನ್ನು ಆಫ್‌ಲೈನ್‌ನಲ್ಲಿ ನಡೆಸುವ ಬದಲಿಗೆ ಆನ್‌ಲೈನ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕರಿಸಲು ಹಾಗೂ ಸಕ್ರೀಯವಾಗಿ ಭಾಗವಹಿಸಲು ಕೋರಿದೆ.

– ವ್ಯವಸ್ಥಾಪಕ ನಿರ್ದೇಶಕರು.

## ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್., ಸಿದ್ದಾಪೂರ

ನೊಂದಾಯಿತ ಕಛೇರಿ : ಜಗದೀಶ ಗುಡಗುಂಟಿಮಠ ವಾಣಿಜ್ಯ ಸಂಕೀರ್ಣ, 2 ನೇ ಮಹಡಿ,
ಉಮಾರಾಮೇಶ್ವರ ದೇವಸ್ಥಾನ ಹತ್ತಿರ, ಪೋಸ್ಟ್-ತಾಲೂಕ : ಜಮಖಂಡಿ- 587301 ಜಿಲ್ಲಾ : ಬಾಗಲಕೋಟ
ದೂರವಾಣಿ: 08353-221115 ಇ ಮೇಲ್- shriprabhu2003@gmail.com

### ಬೇಕಾಗಿದ್ದಾರೆ

ಬಾಗಲಕೋಟೆ, ಬೆಳಗಾವಿ, ವಿಜಯಪುರ ಹಾಗೂ ಧಾರವಾಡ ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರಿಗೆ ಈ ಕೆಳಗಿನ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

| ಅ. ಸಂ | ನೇಮಕಾತಿ ಹುದ್ದೆಯ ವಿವರ | ವಿದ್ಯಾರ್ಹತೆ ಹಾಗೂ ಅನುಭವ |
|---|---|---|
| 1 | **ಪ್ರಧಾನ ವ್ಯವಸ್ಥಾಪಕರು (General Manager)**<br>ಸೌಹಾರ್ದ ಸಹಕಾರಿಯ ಎಲ್ಲ ತತ್ವ, ಸಿದ್ಧಾಂತ ಹಾಗೂ ಕಾನೂನಾತ್ಮಕವಾದ ಆಡಳಿತ ಬಲ್ಲವರಾಗಿದ್ದು ಹಣಕಾಸು, ಲೆಕ್ಕಪತ್ರ ಮತ್ತು ಹಣಕಾಸಿನ ನಿಯಂತ್ರಣಗಳ ಜವಾಬ್ಧಾರಿಯನ್ನು ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವ ಹಾಗೂ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಂಸ್ಥೆಯು ಸರ್ವತೋಮುಖ ಅಭಿವೃದ್ಧಿ ಹೊಂದಲು ವಿವಿಧ ರೀತಿಯ ಯೋಜನೆಗಳನ್ನು ರೂಪಿಸಿ ಅವುಗಳನ್ನು ಆನುಷ್ಠಾನಕ್ಕೆ ತರುವಂತಹ ವ್ಯಕ್ತಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. | **ವಿದ್ಯಾರ್ಹತೆ :**<br>ಎಂ.ಬಿ.ಎ (ಹಣಕಾಸು) ಅಥವಾ ಎಂ.ಕಾಂ<br>**ಅನುಭವ :**<br>15 ವರ್ಷಗಳ ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹಾಗೂ ಕಂಪ್ಯೂಟರ್ ಹಾಗೂ ಇ-ಬ್ಯಾಂಕ್ ಸಾಫ್ಟ್‌ವೇರ್‌ದಲ್ಲಿ ನುರಿತವರಾಗಿರಬೇಕು.<br>ಜನರಲ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ವ ಮ್ಯಾನೇಜಮೆಂಟ್ ಕೈಕೊಂಡಿದ್ದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು. |

**ಸೂಚನೆಗಳು:**

1. ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರ, ವಿದ್ಯಾರ್ಹತೆಯ ಧೃಡೀಕರಣ ಪತ್ರಗಳು ಹಾಗೂ ಅನುಭವ ಪ್ರಮಾಣ ಪತ್ರದೊಂದಿಗೆ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗೆ ಮೇಲಿನ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು.
2. **ಅರ್ಜಿ ಸಲ್ಲಿಸುವ ವಿಳಾಸ :** ನಾಡೋಜ ಜಗದೀಶ ಎಸ್ ಗುಡಗುಂಟಿ, ಅಧ್ಯಕ್ಷರು, ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್ವ ಲಿಮಿಟೆಡ್, ಸಾಕ್ಷಾತ್ಕಾರ ನಿಲಯ, ರಾಮತೀರ್ಥ ಅರಮನೆ ರಸ್ತೆ ಕಿತ್ತೂರ ಚನ್ನಮ್ಮ ಸರ್ಕಲ್, ಜಮಖಂಡಿ 587301 ಜಿಲ್ಲೆ: ಬಾಗಲಕೋಟ ಹಾಗೂ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸುವವರು jagadeeshgudagunti@gmail.com ಹಾಗೂ shriprabhu2003@gmail.com ಎರಡು ಇ-ಮೇಲ್ ವಿಳಾಸಗಳಿಗೆ ರವಾನಿಸಲು ತಿಳಿಸಲಾಗಿದೆ.
3. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಬಂದು ಹೋಗುವ ರೇಲ್ವೆ/ಬಸ್ ಪ್ರಯಾಣದ ವೆಚ್ಚಗಳನ್ನು ಕೊಡಲಾಗುವುದು.

ಸ್ಥಳ : ಜಮಖಂಡಿ
ದಿನಾಂಕ 27 ನೇ ಎಪ್ರೀಲ, 2021

**ನಾಡೋಜ ಜಗದೀಶ ಎಸ್. ಗುಡಗುಂಟಿ**
ಅಧ್ಯಕ್ಷರು ಹಾಗೂ ಸಂಸ್ಥಾಪಕರು

## ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

### ಸಹಕಾರಿಗಳ ಉಪ ನಿಬಂಧಕರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ.

ನಂ.62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ) ಪೈಪ್‌ಲೈನ್ ರಸ್ತೆ, ಬೆಂಗಳೂರು-55

ಈ ಮೂಲಕ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ತಿಳಿಸುವುದೆನೆಂದರೆ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ದಾವಾ ಪ್ರಕರಣಗಳಿಗೆ ಸಂಬಂದಿಸಿದಂತೆ ಬ್ಯಾಂಕ್ ಖಾತೆಯು ಬದಲಾವಣೆಯಾಗಿರುತ್ತದೆ. ಆದ ಕಾರಣ ಸೌಹಾರ್ದ ಸಹಕಾರಿಗಳು ದಾವಾ ಶುಲ್ಕವನ್ನು (ARBITRATION) ಈ ಕೆಳಗೆ ನೀಡಿರುವ ಖಾತೆಗೆ ಜಮೆ ಮಾಡಲು ಸೂಚಿಸಿದೆ.

### ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಬ್ಯಾಂಕ್ ಖಾತೆ ಮಾಹಿತಿ

| | | |
|---|---|---|
| ACCOUNT NAME | : | DRCS-R441 |
| ACCOUNT NO | : | 9921201006031 |
| IFSC CODE | : | CNRB0010424 |

ಸಹಿ/–
ಸಹಕಾರಿಗಳ ಉಪ ನಿಬಂಧಕರು
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ
ಕ.ರಾ.ಸೌ.ಸಂ.ಸ.ನಿ ಬೆಂಗಳೂರು

# ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಕುರಿತು ಸುತ್ತೋಲೆ

**ಸಹಕಾರಚುನಾವಣಾ ಪ್ರಾಧಿಕಾರ,**

ಟಿ.ಟಿ.ಎಂ.ಸಿ.ಕಟ್ಟಡ, 3ನೇಮಹಡಿ, ಶ್ರೀ ಕೆಂಗಲ್ ಹನುಮಂತಯ್ಯರಸ್ತೆ, ಶಾಂತಿನಗರ, ಬೆಂಗಳೂರು-560027.

e-mail : coeckarnataka@gmail.com
Phone : 080-22220066 / 29709014

ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್-19/ 6(1) /ಸುತ್ತೋಲೆ/2021 ದಿನಾಂಕ 26.04.2021

ಚುನಾವಣಾ ತುರ್ತು

## ಸುತ್ತೋಲೆ

ವಿಷಯ : ರಾಜ್ಯದಲ್ಲಿ ಕೊರೋನಾ ವೈರಸ್ ಹರಡದಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಉಲ್ಲೇಖ :
1) ಸರ್ಕಾರದ ಆದೇಶ ಸಂಖ್ಯೆ : ಆರ್.ಡಿ/158/ಟಿ.ಎನ್.ಆರ್/2020 ದಿನಾಂಕ 20.04.2021.
2) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್-19/06/ಸುತ್ತೋಲೆ/2021 ದಿನಾಂಕ 21.04.2021.
3) ಸರ್ಕಾರದ ಆದೇಶ ಸಂಖ್ಯೆ : ಆರ್.ಡಿ/158/ಟಿ.ಎನ್.ಆರ್/2020 ದಿನಾಂಕ 21.04.2021.
4) ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಇವರ ಪತ್ರ ಸಂಖ್ಯೆ : ಡಿಆರ್‌ಟಿ/ಜಿಸಚು/ರಿಅನೇ/ಆಮಂ/ತು/111/2021-22 ದಿನಾಂಕ 26.04.2021.
5) ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಪತ್ರ ಸಂಖ್ಯೆ : ಡಿ.ಆರ್/ಡಿವಿಜಿ/ರಿ.ಅ/ಚುನಾವಣೆ 2020-21 ದಿನಾಂಕ 12.04.2021.
6) ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ, ಕೊಡಗು ಇವರ ಪತ್ರ ಸಂಖ್ಯೆ : ಡಿಆರ್‌ಐ/ಆರ್‌ಎಸ್‌ಆರ್/ಚುನಾವಣೆ/2021-22 ದಿನಾಂಕ 08.04.2021.
7) ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಪತ್ರ ಸಂಖ್ಯೆ : ಡಿಆರ್‌ಎಲ್/ಚುನಾವಣೆ/23/2021-22 ದಿನಾಂಕ 26.04.2021.
8) ಸಹಕಾರ ಸಂಘಗಳ ಉಪ ನಿಬಂಧಕರು, ಧಾರವಾಡ ಜಿಲ್ಲೆ, ಧಾರವಾಡ ಇವರ ಪತ್ರ ಸಂಖ್ಯೆ : ಡಿಆರ್‌ಜಡ್/ಚುನಾವಣೆ/ಸಿಆರ್/2021-22 ದಿನಾಂಕ 26.04.2021.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶ ದಿನಾಂಕ 20.04.2021ರ ಆದೇಶದಂತೆ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಯುವ ಸಲುವಾಗಿ ವಿವಿಧ ಚಟುವಟಿಕೆಗಳಿಗೆ ನಿರ್ಬಂದಗಳನ್ನು ವಿಧಿಸಿದ್ದು, ಅದರಲ್ಲಿ ವಾರಾಂತ್ಯ ಅಂದರೆ ಶುಕ್ರವಾರ ರಾತ್ರಿ 9-00 ಘಂಟೆಯಿಂದ ಸೋಮವಾರ ಬೆಳಿಗ್ಗೆ 6-00 ಘಂಟೆಯವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿರುತ್ತದೆ. ಹಾಗೂ ಈ ಸಂಬಂಧವಾಗಿ ಕಛೇರಿಯಲ್ಲಿ ಶೇಕಡ 50 ರಷ್ಟು ಸಿಬ್ಬಂದಿಗಳು ಹಾಜರಾತಿ ಇರತಕ್ಕದ್ದು ಮತ್ತು ಉಳಿದ ಶೇಕಡ 50 ರಷ್ಟು ಸಿಬ್ಬಂದಿಗಳು ಕೋವಿಡ್-19ರ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುವಂತೆ ನಿರ್ದೇಶನವಿರುತ್ತದೆ.

–02–

ಸದರಿ ಆದೇಶದಂತೆ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಈ ಅವಧಿಯಲ್ಲಿ (ಶನಿವಾರ – ಭಾನುವಾರ) ನಿಗದಿಯಾಗಿದ್ದ ಎಲ್ಲಾ ಚುನಾವಣೆಗಳನ್ನು ಈ ಕಛೇರಿಯ ಉಲ್ಲೇಖ(2)ರ ಸುತ್ತೋಲೆಯಂತೆ ಮುಂದೂಡಿ ಅಂತಹ ಚುನಾವಣೆಗಳನ್ನು ಬೇರೆ ದಿನಾಂಕಗಳಂದು ಮಾಡಲು ತಿಳಿಸಲಾಗಿರುತ್ತದೆ.

ಕೋವಿಡ್–19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ಗಮನಿಸಲಾಗಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿದ್ದು ದಿನಾಂಕ 25.04.2021 ರಂದು ರಾಜ್ಯದಲ್ಲಿ 34,804 ಪ್ರಕರಣಗಳು ದಾಖಲಾಗಿದ್ದು, ಈಪೈಕಿ ಬೆಂಗಳೂರಿನಲ್ಲಿ ಸುಮಾರು 20,733 ಪ್ರಕರಣಗಳು ದಾಖಲಾಗಿರುತ್ತವೆ. ಆದ್ದರಿಂದ, ಇಂತಹ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳನ್ನು ಮುಂದುವರೆಸುವುದು ಸೂಕ್ತವೇ ಎಂಬುದನ್ನು ಪರಿಶೀಲಿಸಲಾಗಿದೆ.

ಇದಕ್ಕೆ ಪೂರಕವಾಗಿ ಉಲ್ಲೇಖ(2)ರ ಪರಿಷ್ಕೃತ ಸರ್ಕಾರದ ಆದೇಶ ದಿನಾಂಕ 21.04.2021ರಂತೆ ನಿಷೇಧಿಸಲಾದ ಚಟುವಟಿಕೆಗಳಲ್ಲಿ ಮತ್ತು ಇತರೆ ಚಟುವಟಿಕೆಗಳಿಗಾಗಿ ಒಗ್ಗೂಡುವಿಕೆ ಹಾಗೂ ದೊಡ್ಡ ಪ್ರಮಾಣದ ಸಮೂಹ ಸೇರುವಿಕೆಯನ್ನು ನಿಷೇಧಿಸಲಾಗಿರುತ್ತದೆ. ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯಲ್ಲಿ ಹೆಚ್ಚಿನ ಜನರು ಚುನಾವಣಾ ಪ್ರಚಾರ ಕಾರ್ಯದಲ್ಲಿ ಮತ್ತು ಚುನಾವಣೆಯ ದಿನಾಂಕದಂದು ಒಂದೇ ಸ್ಥಳದಲ್ಲಿ ಗುಂಪುಗೂಡುವ ಸಂದರ್ಭಗಳು ಹೆಚ್ಚಾಗಿರುತ್ತವೆ.

ಮುಂದುವರೆದು, ಉಲ್ಲೇಖ(3), (4), (5), (6), (7) ಮತ್ತು (8)ಗಳ ಚುನಾವಣಾಧಿಕಾರಿಗಳು ಚುನಾವಣೆ ನಡೆಯಬೇಕಾದ ಸಹಕಾರ ಸಂಘಗಳ ರಿಟರ್ನಿಂಗ್ ಅಧಿಕಾರಿಗಳ ವರದಿಗಳನ್ನು ಪರಿಶೀಲಿಸಿ ರಿಟರ್ನಿಂಗ್ ಅಧಿಕಾರಿಗಳು ಕೋವಿಡ್–19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ದೃಷ್ಟಿಯಿಂದ ಚುನಾವಣೆಯನ್ನು ನಡೆಸುವುದು ಸೂಕ್ತವಲ್ಲವೆಂದು ಅಭಿಪ್ರಾಯಿಸಿ ಚುನಾವಣೆಗಳನ್ನು ಮುಂದೂಡುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರದ ಅನುಮತಿಯನ್ನು ಕೋರಿರುತ್ತಾರೆ ಎಂದು ತಿಳಿಸಿರುತ್ತಾರೆ. ಮತ್ತು ಇತರೆ ಸಹಕಾರಿ ಸಂಘಗಳ ಪದಾಧಿಕಾರಿಗಳು ದೂರವಾಣಿ ಮುಖಾಂತರ ಚುನಾವಣೆ ಮುಂದೂಡಲು ಕೋರುತ್ತಿದ್ದಾರೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14–ಹೆಚ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 5–ಎಂ ಗಳಂತೆ ನೈಸರ್ಗಿಕ ವಿಪತ್ತಿನಿಂದ ಚುನಾವಣೆಗಳನ್ನು ಆಯಾ ಚುನಾವಣೆಗಳ ರಿಟರ್ನಿಂಗ್ ಅಧಿಕಾರಿಗಳ ವರದಿಯಂತೆ ಚುನಾವಣೆಗಳನ್ನು ಮುಂದೂಡಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

ಈಗಾಗಲೇ ಉಲ್ಲೇಖ(1) ಮತ್ತು (2)ರ ಆದೇಶಗಳಂತೆ ಕೋವಿಡ್–19 ಸಾಂಕ್ರಾಮಿಕ ರೋಗವು ನೈಸರ್ಗಿಕ ವಿಪತ್ತು ಎಂದು ಪರಿಗಣಿಸಿ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಕಲಂ 24ರ ವಿಪತ್ತು ನಿರ್ವಹಣಾ ಕಾಯ್ದೆ 2005 ರಡಿ ನಿರ್ಬಂಧಗಳನ್ನು ವಿಧಿಸಲಾಗಿರುತ್ತದೆ.

ಮೇಲೆ ವಿವರಿಸಿರುವ ಕಾರಣಗಳು ಹಾಗೂ ರಾಜ್ಯದ ಎಲ್ಲಾ ಪ್ರದೇಶಗಳಲ್ಲೂ ಕೋವಿಡ್–19 ಸಾಂಕ್ರಾಮಿಕ ರೋಗವು ಹರಡುತ್ತಿದ್ದು, ಮತ್ತು ಕಂಡಿಕೆ (1) ರಲ್ಲಿ ವಿವರಿಸಿರುವಂತೆ ಶೇಕಡ 50 ರಷ್ಟು ಸಿಬ್ಬಂದಿಗಳು ಕರೋನಾ ನಿರ್ವಹಣೆ ಕೆಲಸದಲ್ಲಿ ತೊಡಗಿಸಿಕೊಳ್ಳಲು ಆದೇಶವಿದ್ದು, ಚುನಾವಣಾ ಕರ್ತವ್ಯಕ್ಕೆ ಬೇಕಾದ ಸಿಬ್ಬಂದಿಗಳ ಕೊರತೆಯು ಉಂಟಾಗಿರುವುದರಿಂದ ರಾಜ್ಯದಲ್ಲಿ 2021ನೇ ಸಾಲಿನಲ್ಲಿ ಸಹಕಾರ ಸಂಘಗಳಿಗೆ / ಸೌಹಾರ್ದ ಸಹಕಾರಿಗಳಿಗೆ ನಡೆಯಬೇಕಾಗಿದ್ದ ಚುನಾವಣೆಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿರುತ್ತದೆ ಎಂದು ತಿಳಿಸಿದೆ.

26/4

(ಡಾ. ಎನ್.ಎಸ್.ಚನ್ನಪ್ಪಗೌಡ)
ಆಯುಕ್ತರು,
ಸಹಕಾರಚುನಾವಣಾ ಪ್ರಾಧಿಕಾರ,
ಬೆಂಗಳೂರು–27.

## “ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ 3.70 ಕೋಟಿ ನಿವ್ವಳ ಲಾಭ”

**ಪುತ್ತೂರು :** ಪುತ್ತೂರಿನಲ್ಲಿ ಪ್ರಧಾನ ಕಛೇರಿ ಹೊಂದಿ ರಾಜ್ಯವ್ಯಾಪಿ ಕಾರ್ಯವ್ಯಾಪ್ತಿ ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತವು 31–03–2021 ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೋವೀಡ್–19 ರ ಪ್ರತಿಕೂಲ ಪರಿಸ್ಥಿತಿಯಲ್ಲೂ ರೂ. 3.70 ಕೋಟಿ ನಿವ್ವಳ ಲಾಭ ಗಳಿಸಿರುತ್ತದೆ. 2001ರಲ್ಲಿ ಆರಂಭಗೊಂಡ ಸಹಕಾರಿಯು 17 ಶಾಖೆಗಳ ಮೂಲಕ ಕಾರ್ಯಾಚರಿಸುತ್ತಿದ್ದು, ನಿರಂತರ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ.

ಪ್ರಸ್ತುತ 34,784 ಸದಸ್ಯರನ್ನು ಹೊಂದಿದ್ದು, 210.09 ಕೋಟಿ ಠೇವಣಿಯನ್ನು ಸಂಗ್ರಹಿಸಿ, 158.73 ಕೋಟಿ ಸಾಲ ವಿತರಿಸಿರುವ ಸಹಕಾರಿಯ ದುಡಿಯುವ ಬಂಡವಾಳವು 234.31 ಕೋಟಿ, ಪಾಲು ಬಂಡವಾಳ 9.50 ಕೋಟಿ, ಒಟ್ಟು ವ್ಯವಹಾರವು 369 ಕೋಟಿ ಇರುತ್ತದೆ.

ಸಹಕಾರಿಯು ಸದಸ್ಯರಿಂದ ಠೇವಣಾತಿ ಸಂಗ್ರಹಣೆ, ಸದಸ್ಯರಿಗೆ ವಿವಿಧ ಸಾಲ ಸೌಲಭ್ಯ, ಇ–ಸ್ಟಾಂಪಿಂಗ್, ಸಾಮಾನ್ಯ ಹಾಗೂ ಜೀವ ವಿಮಾ ಸೌಲಭ್ಯ, ಸೇಫ್ ಲಾಕರ್ ಸೌಲಭ್ಯ, ಪಾನ್ ಕಾರ್ಡ್ ಸೌಲಭ್ಯ ಸೇವೆಗಳನ್ನು ನೀಡುತ್ತಿದೆ ಎಂದು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಸ್ ಆರ್ ಸತೀಶ್ಚಂದ್ರ ಹಾಗೂ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ ಎ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿಯ ಬೆಳವಣಿಗೆಗೆ ಕಾರಣಕರ್ತರಾದ ಸದಸ್ಯರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿರುತ್ತಾರೆ.

## 1346 ಕೋಟಿ ರೂಪಾಯಿ ವಹಿವಾಟು ದಾಟಿದ ಸುಕೋ ಬ್ಯಾಂಕ್ : ಷೇರುದಾರರಿಗೆ ಶೇ. 9ರ ಡಿವಿಡೆಂಡ್

**ಬಳ್ಳಾರಿ :** ಸುಕೋ ಬ್ಯಾಂಕ್ ಒಟ್ಟು 1346 ಕೋಟಿ ರೂಪಾಯಿ ವ್ಯವಹಾರ ನಡೆಸಿ 11.83 ಕೋಟಿ ರೂಪಾಯಿ ಲಾಭಗಳಿಕೆ ಮಾಡಿದೆ ಎಂದು ಎಂದು ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 2020–21ರ ಆರ್ಥಿಕ ಸಾಲಿನಲ್ಲಿ ಬ್ಯಾಂಕ್ ಒಟ್ಟು 858 ಕೋಟಿ ರೂಪಾಯಿ ಠೇವಣಿ ಸಂಗ್ರಹ ಮಾಡಿ, 488 ಕೋಟಿ ರೂಪಾಯಿಗಳ ಸಾಲ ನೀಡಿ ಒಟ್ಟು 11.83 ಕೋಟಿ ರೂಪಾಯಿ ಲಾಭ ಗಳಿಸಿದೆ ಎಂದರು.

ಆದಾಯ ತೆರಿಗೆ ಇಲಾಖೆಗೆ 2.47 ಕೋಟಿ ರೂಪಾಯಿ ಮುಂಗಡ ತೆರಿಗೆ ಪಾವತಿಸಿದ ನಂತರ ಬ್ಯಾಂಕ್ 3.35 ಕೋಟಿ ರೂಪಾಯಿ ನಿವ್ವಳ ಲಾಭವನ್ನು ಗಳಿಸಿದ್ದು, ಷೇರು ಬಂಡವಾಳಗಾರರಿಗೆ ಶೇ. 9 ರಷ್ಟು ಡಿವಿಡೆಂಡ್ (ಲಾಭಾಂಶ) ನೀಡಲು ಸರ್ವ ಸದಸ್ಯರ ಸಭೆಗೆ ಶಿಫಾರಸ್ಸು ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಸುಕೋ ಬ್ಯಾಂಕ್‌ನ 28 ಶಾಖೆಗಳಲ್ಲೂ ಏಪ್ರಿಲ್ ಕೊನೆಯ ವಾರದಿಂದ ಸ್ವತಂತ್ರವಾದ ಐಎಫ್‌ಎಸಿ ಸಂಖ್ಯೆಯನ್ನು ದೈನಂದಿನ ವ್ಯವಹಾರದಲ್ಲಿ ಬಳಕೆ ಮಾಡಿಕೊಳ್ಳಲು ತಂತ್ರಜ್ಞಾನದ ಉನ್ನತೀಕರಣ ಸಿದ್ಧತೆ ನಡೆದಿದೆ. ಸ್ವತಂತ್ರವಾದ ಐಎಫ್‌ಎಸಿ ಸಂಖ್ಯೆಯ ಬಳಕೆಯಿಂದಾಗಿ ಗ್ರಾಹಕರು ತ್ವರಿತವಾಗಿ ಹಣ ವರ್ಗಾವಣೆ ಮಾಡಬಹುದಾಗಿದೆ ಎಂದರು.

ಬ್ಯಾಂಕ್‌ನ ವ್ಯವಹಾರವನ್ನು ವಿಸ್ತರಿಸುವ ಹಿನ್ನಲೆಯಲ್ಲಿ ‘ಕನೆಕ್ಟ್ @ ಸುಕೋ ಬ್ಯಾಂಕ್’ ಹೊಸ ಪರಿಕಲ್ಪನೆಯನ್ನು ಸಹಕಾರಿ ಕ್ಷೇತ್ರದಲ್ಲಿ ಪ್ರಾರಂಭಿಸಿ ಅನೇಕರಿಗೆ ಸ್ವಾವಲಂಬನೆಯ ಬದುಕನ್ನು ಕಲ್ಪಿಸಲಾಗಿದೆ. ‘ಸ್ಟಾರ್ಟ್‌ಅಪ್ ಟು ಸೆಲ್ಫ್ ಎಂಪ್ಲಾಯ್ಮೆಂಟ್’ ವಿಶೇಷ ಸಾಲ ಯೋಜನೆ ಅಡಿಯಲ್ಲಿ ಮೂರು ವಿಶೇಷ ಸ್ಟಾರ್ಟ್‌ಅಪ್ ಕಂಪನಿಗಳ ಜೊತೆ ಬ್ಯಾಂಕ್ ಒಪ್ಪಂದ ಮಾಡಿಕೊಂಡು ಫ್ರಾಂಚೈಸಿ ಪ್ರಾರಂಭಿಸಲು ನವ ಉದ್ಯಮಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ ಎಂದು ತಿಳಿಸಿದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ಚಾಮರಾಜನಗರ :** ಶ್ರೀ ಅಕ್ಷಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಚಾಮರಾಜನಗರ ಇದರ ಆಡಳಿತ ಮಂಡಳಿ ಚುನಾವಣೆಯಲ್ಲಿ ಶ್ರೀ ಕೆ. ವೀರಭದ್ರಸ್ವಾಮಿ ಅಧ್ಯಕ್ಷರಾಗಿ ಶ್ರೀ ಎಂ. ಲಿಂಗಪ್ಪ ರವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

**ಶ್ರೀ ವೀರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಸಸಾಲಟ್ಟಿ**



ಶ್ರೀ ಸುರೇಶ ಹುಲೆಪ್ಪ ಮಂಟೂರ
ಅಧ್ಯಕ್ಷರು



ಶ್ರೀ ಅಶೋಕ ಮಹಾದೇವ ಕೊಕಟನೂರ
ಉಪಾಧ್ಯಕ್ಷರು

# ಸನ್ಮಾನ ಕಾರ್ಯಕ್ರಮ ಹಾಗೂ ಉಚಿತ ಕೋವಿಡ್-19 ಲಸಿಕೆ ಶಿಬಿರ




**ದಕ್ಷಿಣ ಕನ್ನಡ :** ದಿನಾಂಕ 11.04.2021 ರಂದು ಮಂಗಳೂರು ಸೌಹಾರ್ದ ಸಹಕಾರಿ ನಿ., ಸಹಯೋಗದೊಂದಿಗೆ ಮಂಗಳೂರು ಸ್ಟೋರ್ ಹತ್ತಿರ ಸಹಕಾರಿಯ ಅಧ್ಯಕ್ಷರಾದ ಕೆ. ಭಾಸ್ಕರ್‌ರಾವ್, ಮಾಜಿ ಕಾರ್ಪೋರೇಟರ್, ಅಧ್ಯಕ್ಷತೆಯಲ್ಲಿ ಮಂಗಳೂರು ಮೇಯರ್ ಆಗಿ ಆಯ್ಕೆಯಾದ ಶ್ರೀ ಪ್ರೇಮನಂದ ಶೆಟ್ಟಿ ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಐವನ್ ಡಿಸೋಜಾ, ಮಾಜಿ ವಿಧಾನ ಪರಿಷತ್ ಸದಸ್ಯರು, ಶ್ರೀ ಸುಧೀರ್ ಶೆಟ್ಟಿ, ಮಾಜಿ ಮಹಾನಗರ ಪಾಲಿಕೆ ಮುಖ್ಯ ಸಚೇತಕರು, ಶ್ರೀ ಜೆ. ಕೊರಗಪ್ಪ, ವಿಕಾಶ್ ಕಾಲೇಜ್ ಟ್ರಸ್ಟ್, ಶ್ರೀ ವಸಂತ್ ಶೆಟ್ಟಿ, ಬಂಟರ ಸಂಘದ ಪ್ರಧಾನ ಕಾರ್ಯದರ್ಶಿ, ಶ್ರೀ ಜೆ. ಯೋಗೇಶ್ ಕುಮಾರ್, ಗುರುವನ ದೇವಾಸ್ಥಾನದ ಅಧ್ಯಕ್ಷರು, ಶ್ರೀ ಶಿವಾನಂದ ಪ್ರಭು, ಪ್ರಭು ಸ್ವೀಟ್, ಆಡಳಿತ ಮಂಡಳಿ ಸದಸ್ಯರು ಹಾಗೂ ಇತರರು ಉಪಸ್ಥಿತರಿದ್ದರು.

ದಿನಾಂಕ 20.04.2021 ರಂದು ಮಂಗಳೂರು ಸೌಹಾರ್ದ ಸಹಕಾರಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜೆಪ್ಪು ಇದರ ಸಹಯೋಗದೊಂದಿಗೆ ಉಚಿತ ಕೋವಿಡ್–19 ಲಸಿಕೆ ಶಿಬಿರದ ಉದ್ಘಾಟನೆಯನ್ನು ಸಹಕಾರಿಯ ಸದಸ್ಯರಾದ, ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ. ಸೋಜಾ, ನೇರವೇರಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ಭಾಸ್ಕರ್ ರಾವ್ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಾಯಕರಾದ ಸುಪ್ರಿತಾ, ಸುರೇಖಾ, ಪವಿತ್ರ ಹಾಗೂ ಜಯಮಾಲಾ ಇವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ಕೃಷ್ಣ ಭಟ್, ನಿರ್ದೇಶಕರಾದ ವಿಜಿತಾ ರಾವ್, ಲತಾ ನ್ ಅಲ್ವ, ಸುಪ್ರೀತ್ ಜೆ. ಕೆ, ಸುಂದರ್ ಸಾಲ್ಯಾನ್, ಸದಾಶಿವ ಅಮೀನ್, ರತನ್ ಕುಮಾರ್, ರಾಮ್ ಮೋಹನ್ ಕಾರ್ಯದರ್ಶಿ ಚಂದ್ರಿಕಾ ಡಿ ರಾವ್, ಪ್ರಜ್ವಲ್, ವಸಂತ್ ಶೆಟ್ಟಿ, ಶ್ರೀ ದೇವಿ ಹಾಗೂ ಹಾಗೂ ಅಂತರಾಷ್ಟ್ರೀಯ ವೈಟ್ ಲಿಫ್ಟರ್ ಶ್ರೀ ಹರೀಶ್ ಕುಮಾರ್, ಸೀನಿಯರ್ ಅಥ್ಲೆಟಿಕ್ಸ್ ಶ್ರೀ ಅನಂದ್ ಸೋನ್ಸ್, ಶ್ರೀ ಭಾಸ್ಕರ್ ಕರ್ಕೇರ, ಶ್ರೀ ಪ್ರದೀಪ್ ಮಾರ್ನಮಿಕಟ್ಟಾ, ಶ್ರೀ ಅಶ್ರಫ್ ಎಮ್.ಎಸ್ ಉಪಸ್ಥಿತರಿದ್ದರು.




# ದಿ ಜುಮನಾಳ ಸೌಹಾರ್ದ ಸಹಕಾರಿಯಿಂದ ಸ್ಯಾನಿಟೈಜ್ ವ್ಯವಸ್ಥೆ ಕಾರ್ಯಕ್ರಮ

ದಿ ಜುಮನಾಳ ಸೌಹಾರ್ದ ಸಹಕಾರಿಯಿಂದ ಕೋವೀಡ್ ಕಾರಣದಿಂದ ಗ್ರಾಮವೆಲಾ ಸ್ಯಾನಿಟೈಜ್ ಮಾಡಲಾಯಿತು.



**ದಾವಣಗೆರೆ :** ದಿನಾಂಕ 30.03.2021 ರಂದು ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ನಂದಿ ಸೌಹಾರ್ದ ಸಹಕಾರಿ ನಿ., ಮಲೇಬೆನ್ನೂರು, ದಾವಣಗೆರೆ ಜಿಲ್ಲೆ ಈ ಸಹಕಾರಿಯು ಸಹಕಾರ ಸಂಘಗಳ ಕಾಯ್ದೆಯಿಂದ ಸೌಹಾರ್ದ ಕಾಯ್ದೆಗೆ ಪರಿವರ್ತನೆಗೊಂಡಿದ್ದು ರೂ.13 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸದರಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ಸೌಹಾರ್ದ ಕಾಯ್ದೆ ಬಗ್ಗೆ ಮಾಹಿತಿ ನೀಡಿ ಸದರಿಯವರಿಂದ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿಯನ್ನು ಸ್ವೀಕರಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರನಗೌಡ ರವರು ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಡಾ. ಬಿ.ಆರ್ ಅಂಬೇಡ್ಕರ್ ಜಯಂತಿ ಆಚರಣೆ

**ಮಂಡ್ಯ :** ದಿನಾಂಕ 14.04.2021 ರಂದು ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು ಕಛೇರಿಯಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ 130ನೇ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗಯ್ಯ ರವರು ಉಪಾಧ್ಯಕ್ಷರಾದ ಶ್ರೀ ಕೆ.ಎನ್ ಪ್ರಸಾದ್ ರವರು, ನಿರ್ದೇಶಕರು ಮತ್ತು ಸಿಇಓ ಆದ ಶ್ರೀಮತಿ ಪೂರ್ಣಿಮಾ ಉಪಸ್ಥಿತರಿದ್ದರು.

**ಮದ್ದೂರು :** ದಿನಾಂಕ 14.04.2020 ರಂದು ಶ್ರೀ ಎಸ್.ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು ಕಛೇರಿಯಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ 130ನೇ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಸ್ವಾಮಿ ರವರು, ನಿರ್ದೇಶಕರುಗಳು ಮತ್ತು ಸಿಇಓ ಆದ ಶ್ರೀಮತಿ ಲಕ್ಷ್ಮೀ ರವರು ಉಪಸ್ಥಿತರಿದ್ದರು.

# ಅರಿಹಂತ ಪತ್ತಿನ ಸೌಹಾರ್ದ ಸಹಕಾರಿಗೆ 6.5 ಕೋಟಿ ನಿವ್ವಳ ಲಾಭ"

**ಬೋರಗಾಂವ :** ಸದಸ್ಯರ ಬೆಂಬಲ, ಪಾರದರ್ಶಕ ಆಡಳಿತ ಹಾಗೂ ದಕ್ಷ ಆಡಳಿತದೊಂದಿಗೆ ಪ್ರಗತಿಯತ್ತ ಹೆಜ್ಜೆ ಹಾಕುತ್ತಿರುವ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಕಳೆದ ಆರ್ಥಿಕ ವರ್ಷದಲ್ಲಿ 4,239.91 ಕೋಟಿ ರೂ. ವ್ಯವಹಾರ ಮಾಡಿದೆ. ಪ್ರಸಕ್ತ ಸಾಲಿನಲ್ಲಿ 863 ಕೋಟಿ ರೂ. ಠೇವಣಿ ಸಂಗ್ರಹಿಸಿ 6.5 ಕೋಟಿ ರೂ. ಲಾಭಗಳಿಸಿದೆ ಎಂದು ಸಹಕಾರಿ ಅಧ್ಯಕ್ಷ ರಾವಸಾಹೇಬ ಪಾಟೀಲ ಮಾಹಿತಿ ನೀಡಿದ್ದಾರೆ.

12,366 ಸದಸ್ಯರನ್ನು ಹೊಂದಿರುವ ಸಂಸ್ಥೆಯು 4.35 ಕೋಟಿ ರೂ ಶೇರು ಬಂಡವಾಳ, 913.33 ಕೋಟಿ ರೂ ದುಡಿಯುವ ಬಂಡವಾಳ, 48.44 ಕೋಟಿ ರೂ. ಠೇವು ಹೊಂದಿ 278.14 ಕೋಟಿ ರೂ ಗುಂತಾವಣಿ ಮಾಡಿ, ವಾರ್ಷಿಕ 4,239.91 ಕೋಟಿ ರೂ ವ್ಯವಹಾರ ಮಾಡಿದೆ. 2021–22ನೇ ಆರ್ಥಿಖ ವರ್ಷದಲ್ಲಿ ಸಹಕಾರಿಯು 1 ಸಾವಿರ ಕೋಟಿ ರೂ. ಠೇವು ಸಂಗ್ರಹ ಮಾಡುವ ಗುರಿ ಹೊಂದಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಉತ್ತಮ ಪಾಟೀಲ, ಸಂಸ್ಥೆಯ ಉಪಾಧ್ಯಕ್ಷ ಸುಭಾಷ ಶೆಟ್ಟಿ, ಅರಿಹಂತ ಶುಗರ್ಸ್ ಎಂಡಿ, ಉದ್ಯಮಿ ಅಭಿನಂದನ ಪಾಟೀಲ, ಮುಖ್ಯ ವ್ಯವಸ್ಥಾಪಕ ಅಶೋಕ ಬಂಕಾಪುರೆ, ಸಹ ವ್ಯವಸ್ಥಾಪಕ ಶಾಂತಿನಾಥ ತೇರದಾಳೆ, ಅಮೂಲ ನಾಯಿಕ ಇತರರು ಉಪಸ್ಥಿತರಿದ್ದರು.

### ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚೆಳ್ಳಕೆರೆ.

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 35.48 |
| ಒಟ್ಟು ನಿಧಿಗಳು | 16.04 |
| ಸಾಲ & ಮುಂಗಡಗಳು | 40.50 |
| ಒಟ್ಟು ವ್ಯವಹಾರ | 76.00 |
| ಹೂಡಿಕೆಗಳು | 17.91 |
| ಒಟ್ಟು ನಿವ್ವಳ ಲಾಭ | 2.83 |
| ಇ.ಪಿ.ಎಸ್ (ರೂ.100 ಪ್ರತಿ ಶೇರು) | 178.27 |
| ಪುಸ್ತಕ ಮೌಲ್ಯ | 1155.0 |
| ಒಟ್ಟು ಆದಾಯ | 6.32 |
| ದುಡಿಯುವ ಬಂಡವಾಳ | 64.85 |

### ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹಲ್ಲೋಳಿ, ಬೆಳಗಾವಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ |
|---|---|
| ಸದಸ್ಯರ ಸಂಖ್ಯೆ | 11,409 |
| ವಸೂಲಾದ ಶೇರು ಬಂಡವಾಳ | 78,00,500 |
| ಕಾಯ್ದಿಟ್ಟ ನಿಧಿ & ಇತರ ನಿಧಿಗಳು | 13,13,93,028 |
| ಠೇವಣಿಗಳು | 169,73,85,263 |
| ಗುಂತಾವಣಿಗಳು | 78,20,15,464 |
| ಸಾಲಗಳು | 103,45,58,079 |
| ದುಡಿಯುವ ಬಂಡವಾಳ | 183,65,78,791 |
| ಒಟ್ಟು ವಹಿವಾಟು | 963,72,93,709 |
| ನಿವ್ವಳ ಲಾಭ | 4,13,81,803 |
| ಲಾಭಾಂಶ ನೀಡಿದ್ದು | 25 %. |
| ಶಾಖೆಗಳು | 1+7=8 |
| ಸಾಲ ವಸೂಲಾತಿ | 99.50% |

### ವಿಶ್ವಚೇತನಾ ಸೌಹಾರ್ದ ಸಹಕಾರಿ ನಿ., ಹರಿಯೂರು

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಸ್ವಂತ ಬಂಡವಾಳ | 401.17 |
| ಒಟ್ಟು ಠೇವಣಿ | 355.86 |
| ಸಾಲ & ಮುಂಗಡಗಳು | 340.63 |
| ಒಟ್ಟು ಎನ್.ಪಿ.ಎ ಅನುಪಾತ | 1.78 |
| ನಿವ್ವಳ ಎನ್.ಪಿ.ಎ ಅನುಪಾತ | 0% |
| ಒಟ್ಟು ನಿವ್ವಳ ಲಾಭ | 11.11 |
| ಒಟ್ಟು ವ್ಯವಹಾರ | 2087.12 |
| ಒಟ್ಟು ವ್ಯವಹಾರ ಲಾಭ | 0.53% |
| ಶೇರು ಬಂಡವಾಳ | 45.32 |
| Net worth | 53.78 |
| Investment Including RFED | 5.13 |



**ಉಡುಪಿ :** ಸಮಾಪನೆ ಹಂತದಲ್ಲಿದ್ದ ಜಯ ಸೌಹಾರ್ದ ಸಹಕಾರಿ ನಿ. ಇದಕ್ಕೆ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡ ಪರಿಣಾಮವಾಗಿ "ನವ ಭಾರತ ಸೌಹಾರ್ದ ಸಹಕಾರಿ" ಎಂಬ ನೂತನ ಹೆಸರಿನೊಂದಿಗೆ ಹಾಗೂ ನೂತನ ಆಡಳಿತ ಮಂಡಳಿಯೊಂದಿಗೆ ಪುನಃ ತನ್ನ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸಿರುತ್ತದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ನೆರವೇರಿಸಿದರು.

## ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಯವರಿಂದ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್, ಐಎಂಎ, ಜನತಾ ಸೌಹಾರ್ದ ಸಹಭಾಗಿತ್ವದಲ್ಲಿ ಹೈಟೆಕ್ ಕೋವಿಡ್ ಆಸ್ಪತ್ರೆ ಉದ್ಘಾಟನೆ



**ಸಿಂಧನೂರು** : ಕೋವಿಡ್ ರೋಗಿಗಳಿಗಾಗಿ ಐಎಂಎ ಹಾಲ್‌ನಲ್ಲಿ ಅತ್ಯಾಧುನಿಕ ಸುಕೋ-ಐಎಂಎ ಸಹಭಾಗಿತ್ವ ಹಾಗೂ ಜನತಾ ಸೌಹಾರ್ದ ಸಹಕಾರಿ ನಿಯಮಿತ ಸಹಕಾರದಲ್ಲಿ 30 ಹಾಸಿಗೆ ಹೈಟೆಕ್ ಕೋವಿಡ್ ಆಸ್ಪತ್ರೆಯನ್ನು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಲೋಕಾರ್ಪಣೆ ಮಾಡಿದರು.

ಆನ್‌ಲೈನ್‌ನಲ್ಲಿ ಈ ವಿಶೇಷ ಕೋವಿಡ್ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಷ್ಟ ಕಾಲದಲ್ಲಿ ಸರಿಯಾದ ನಿರ್ಣಯ ತೆಗೆದುಕೊಂಡು ಸುಕೋ ಅವರು ಹಲವಾರು ಬದುಕಿನಲ್ಲಿ ಬೆಳಕು ಚೆಲ್ಲುವ ಕೆಲಸಕ್ಕೆ ಕೈ ಹಾಕಿದ್ದಾರೆ. ಈ ಕೋವಿಡ್ ಆಸ್ಪತ್ರೆಗೆ ಸಂಬಂಧಿಸಿ ಶಾಸಕ ವೆಂಕಟರಾವ್ ನಾಡಗೌಡ ಅವರು ಎರಡೂ ಮೂರು ಬಾರಿ ನನಗೆ ಕರೆ ಮಾಡಿ ಸರಕಾರದ ಸಹಕಾರ ಕೇಳಿದ್ದಾರೆ ಎಂದು ತಿಳಿಸಿದರು.

ಐಎಂಎ ಸಭಾ ಭವನದಲ್ಲೇ ತಲೆ ಎತ್ತಲಿರುವ ಈ ಕೋವಿಡ್ ಆಸ್ಪತ್ರೆಗೆ ಸುಕೋ ಬ್ಯಾಂಕಿನಿಂದ 25 ರಿಂದ 30 ಲಕ್ಷ ರೂ. ಖರ್ಚು ಮಾಡಲಾಗುತ್ತಿದೆ. ಹಾಕಿದ ಹಣಕ್ಕೆ ಯಾವುದೇ ಲಾಭ ಬಯಸುವುದಿಲ್ಲ. ಸುಸಜ್ಜಿತ ಆಸ್ಪತ್ರೆಯ ಖರ್ಚನ್ನು ನಿಭಾಯಿಸಿ, ಹೈಟೆಕ್ ಸೌಲಭ್ಯ ಕಲ್ಪಿಸುವ ಖರ್ಚಿಗಾಗಿ ಸರಕಾರ ನಿಗದಿಪಡಿಸಿದ ದರದಲ್ಲಿ ಶೇ.50 ರಷ್ಟು ಮಾತ್ರ ಶುಲ್ಕ ವಿಧಿಸಲಾಗುತ್ತದೆ. ನಿಸರ್ಗದ ವ್ಯವಸ್ಥೆ ಇರುವ ವಾಕಿಂಗ್‌ಗೂ ಜಾಗವಿರುವ ಈ ಆಸ್ಪತ್ರೆಯಲ್ಲಿ ಅಗತ್ಯಕ್ಕೆ ಚಿಕಿತ್ಸೆ ನೀಡಲಾಗುತ್ತದೆ. ಆಸ್ಪತ್ರೆಗೆ ಇಂಡಿಯನ್ ಮೆಡಿಕಲ್ ಅಸೋಷಿಯೇಶನ್ ನವರು ತಾವೇ ಉಚಿತ ಸಭಾಭವನದ ವ್ಯವಸ್ಥೆ ಮಾಡಿಕೊಟ್ಟಿದ್ದು, ಜೊತೆಗೆ ವೈದ್ಯಕೀಯ ನೆರವಿಗೆ ಮುಂದಾಗಿದ್ದಾರೆ ಎಂದರು.

ಸುಕೋ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷ ಮನೋಹರ್ ಮಸ್ಕಿ ಅವರು ಮಾತನಾಡಿ ಹವಾನಿಯಂತ್ರಿಕ ಹಾಗೂ ಸುಸಜ್ಜಿತ ಪ್ರದೇಶದಲ್ಲಿ ಉಚಿತ ಕೋವಿಡ್ ಆಸ್ಪತ್ರೆ ತೆರೆಯುವ ಉದ್ದೇಶ ವ್ಯಕ್ತಪಡಿಸಿದಾಗ ಶಾಸಕ ವೆಂಕಟರಾವ್ ನಾಡಗೌಡರು ಅಗತ್ಯ ಅನುಮತಿ ದೊರಕಿಸಿಕೊಡಲು ಉತ್ಸಾಹ ತೋರಿದರು. ಇಲ್ಲಿನ ಐಎಂಎ ತಂಡ ಹಾಗೂ ಡಾ. ಶಿವರಾಜ್ ಅವರು ಈ ನಿಟ್ಟಿನಲ್ಲಿ ಪೂರಕ ಸಹಕಾರ ನೀಡಿದ ಹಿನ್ನೆಲೆಯಲ್ಲಿ ಗವಿಸಿದ್ದೇಶ್ವರ ಆಸ್ಪತ್ರೆಯ ವಿಶೇಷ ವಾರ್ಡ್ ಹೆಸರಿನಲ್ಲಿ ಕೋವಿಡ್ 30 ಹಾಸಿಗೆ ಸುಸಜ್ಜಿತ ಕೋವಿಡ್ ಆಸ್ಪತ್ರೆ ತೆರೆಯಲಾಗುತ್ತಿದೆ. ಮಕ್ಕಳ ತಜ್ಞ ಡಾ.ಕೆ. ಶಿವರಾಜ ಮಾತನಾಡಿ ಸುತ್ತಲಿನ ತಾಲ್ಲೂಕು ಪ್ರದೇಶಗಳ ಪೈಕಿ ಎಲ್ಲಿಯೂ ಕೋವಿಡ್ ಆಸ್ಪತ್ರೆಯಿಲ್ಲ. ಪ್ರಪ್ರಥಮ ಬಾರಿಗೆ 30 ಹಾಸಿಗೆ ಹವಾ ನಿಯಂತ್ರಿತ, ಹವಾ ಶುದ್ದೀಕೃತ ಕೋವಿಡ್ ಆಸ್ಪತ್ರೆ ಇಲ್ಲಿ ಆರಂಭಿಸಲಾಗಿದೆ. 6-8 ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಿಟಿಕಲ್ ಕೇಸ್‌ಗಳನ್ನು ನಿಭಾಯಿಸಲು ಕೂಡ ವಿಶೇಷ ವಾರ್ಡ್ ಮಾಡಲಾಗುತ್ತಿದೆ. ಜಂಬೋ ಸಿಲಿಂಡರ್ ವ್ಯವಸ್ಥೆಯಿದ್ದು, ಸುಕೋ ಬ್ಯಾಂಕಿನಿಂದ ಆಕ್ಸಿಜನ್ ತರಲಿಕ್ಕೆ ಲಾರಿ, ವಾಹನ ಚಾಲಕರ ವ್ಯವಸ್ಥೆಯೂ ಮಾಡಿದೆ ಎಂದರು.

ಸುಕೋ ಬ್ಯಾಂಕ್ ಅಧ್ಯಕ್ಷ ಮೋಹಿತ್ ಮಸ್ಕಿ, ಐಎಂಎ ಅಧ್ಯಕ್ಷ ಡಾ. ಸುಬ್ಬರಾವ್, ವೈದ್ಯರಾದ ಡಾ. ಶರಣಬಸವ, ಡಾ. ಚನ್ನನಗೌಡ ಪಾಟೀಲ್, ಡಾ. ಬ್ರಹ್ಮಾನಂದರೆಡ್ಡಿ, ಹನುಮಂತರೆಡ್ಡಿ ಹಾಗೂ ಇತರರು ಉಪಸ್ಥಿತರಿದ್ದರು.

## ಗಂಗಾ ಕಾವೇರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು - ಕೋವೀಡ್ ಸೋಂಕಿತರ ಪಾಲಿಗಿವರು ಆಪತ್ಬಾಂಧವರು



**ತುಮಕೂರು** : ತುಮಕೂರು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಸಾವಿರಾರು ಕೊರೊನಾ ಸೋಂಕಿತರು ಹೆಚ್ಚುತ್ತಲೇ ಇದ್ದಾರೆ. ತಿಪಟೂರು ನಗರ ಮತ್ತು ಗ್ರಾಮಗಳು ಸಹ ಕೊರೋನಾ ಮಹಾಮಾರಿಯಿಂದ ನಲುಗುತ್ತಿವೆ. ಇಂತಹ ಸಂದರ್ಭದಲ್ಲಿ ಎಷ್ಟೋ ಆಸ್ಪತ್ರೆಗಳಲ್ಲಿ ಬೆಡ್ ಸಿಗದೆ, ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಸೋಂಕಿತರು ಸಾವನಪ್ಪುತ್ತಿದ್ದಾರೆ. ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂ. ವ್ಯಯಿಸಿದರೂ ಗುಣಮುಖರಾಗಿ ಹೊರಬರುತ್ತಿಲ್ಲ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಗಂಗಾ ಕಾವೇರಿ ಸೌಹಾರ್ದ ಸಹಕಾರಿ ನಿ., ತಿಪಟೂರು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಡಾ. ಶ್ರೀಧರ್ ವೈದ್ಯ ದಂಪತಿ ಇವರು ಕೋವಿಡ್ ರೋಗಿಗಳ ಪಾಲಿಗೆ ಆಪತ್ಬಾಂಧವರಾಗಿದ್ದಾರೆ.

ಇಲ್ಲಿಯ ಕುಮಾರ್ ಆಸ್ಪತ್ರೆಯ ಮಾಲೀಕರಾದ ಡಾ. ಶ್ರೀಧರ್ ವೈದ್ಯ ದಂಪತಿ ನಿತ್ಯ 60 ಕೊರೊನಾ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದಾರೆ. ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದಾರೆ. ರೋಗಿಯ ಕುಟುಂಬದವರಿಗೂ 3 ಹೊತ್ತು ಉಚಿತ ಊಟ ನೀಡುತ್ತಿದ್ದಾರೆ. 30 ಮಂದಿಗೆ ಉಚಿತ ಆಕ್ಸಿಜನ್ ಬೆಡ್, 30 ಜನರಿಗೆ ಉಚಿತ ಐಸಿಯು ಬೆಡ್‌ನಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಅಷ್ಟೇ ಅಲ್ಲ ಕೋವಿಡ್ ರೋಗಿಗಳನ್ನು ಅಲಂಗಿಸಿಕೊಂಡು ಅವರಲ್ಲಿ ಆತ್ಮಸ್ಥೈರ್ಯ ತುಂಬುತ್ತಿದ್ದಾರೆ. ಇದಲ್ಲದೆ ಆಸ್ಪತ್ರೆಯ ಎದುರುಗಡೆ ಇರುವ ಜಾಗದಲ್ಲಿ 100 ಹಾಸಿಗೆ ಸೌಲಭ್ಯವುಳ್ಳ ಕೋವಿಡ್ ಕೇರ್ ಸೆಂಟರ್ ನಿರ್ಮಿಸಿ ಅಲ್ಲಿರುವ ಸೋಂಕಿತರಿಗೂ ಚಿಕಿತ್ಸೆ ನೀಡುವುದರ ಮೂಲಕ ಕೊರೊನಾ ಸಂಕಷ್ಟದ ಸಮಯದಲ್ಲಿ ನಿಜವಾದ ಕೊರೊನಾ ವಾರಿಯರ್ಸ್ ಆಗಿ ಮಾದರಿಯಾಗಿದ್ದಾರೆ. ಸಂಕಷ್ಟದ ಕಾಲದಲ್ಲಿ ಮಾನವೀಯತೆ ಮೆರೆಯುವ ಮೂಲಕ ವೈದ್ಯೋ ನಾರಾಯನೋ ಹರಿ ಎಂಬ ಮಾತನ್ನು ನಿಜವಾಗಿದ್ದಾರೆ. ಇದರಿಂದ ಆರ್ಥಿಕವಾಗಿ ಹಿಂದುಳಿದವರಿಗೆ ಈ ಆಸ್ಪತ್ರೆಯು ರಕ್ಷಾಕವಚವಾಗಿದೆ.

# ನಾವೇ ಯೋಚಿಸಿ ನೋಡಬೇಕು ಅಲ್ಲವೇ ?

– ಶ್ರೀಮತಿ ಡಿ. ಯಶೋದಾ

**ಕೃಷ್ಣನ ಹುಡುಕಾಟದಲ್ಲಿ**

ನನ್ನ ಗಂಡ ಆ ಕೃಷ್ಣನಂತಿಲ್ಲ, ಆ ಕೃಷ್ಣನಂತೆ ಮಾತನಾಡುವುದಿಲ್ಲ, ನಗಿಸುವುದಿಲ್ಲ, ನನಗಾಗಿ ಏನೂ ಮಾಡುವುದಿಲ್ಲ, ಅವನಂತೆ ಪ್ರೀತಿ ಮಾಡುವುದಿಲ್ಲ ಹೀಗೆ ಆಕೆ ಕನ್ನಡ ರಾಧಾಕೃಷ್ಣ ಧಾರಾವಾಹಿಯಲ್ಲಿನ ಕೃಷ್ಣನಿಗೆ ತನ್ನ ಗಂಡನನ್ನು ಹೋಲಿಸಿಕೊಂಡು ಮಾತನಾಡುತ್ತಿದ್ದರು.

'ನನ್ನ ಮಗ ಆ ಕೃಷ್ಣನಂತೇ ಆಗಬೇಕು' ಎಂಬುದು ಮತ್ತೊಬ್ಬರ ಆಶಯ.

'ನನಗೆ ಆ ಕೃಷ್ಣನಂತಹ ಗೆಳೆಯನಿಲ್ಲ' ಎಂಬುದು ಇನ್ನೊಬ್ಬರ ಅಳಲು.

ಇದು ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುತ್ತಿರುವ ರಾಧಾಕೃಷ್ಣ ಧಾರಾವಾಹಿಯ (ಹಿಂದಿ ರಾಧಾಕೃಷ್ಣ ಧಾರಾವಾಹಿಯ ಕನ್ನಡ ಅವತರಣಿಕೆ) ಪ್ರಭಾವ.

**ನೀ ಪ್ರೀತಿಯೋ, ನೀ ಪ್ರೇಮವೋ, ಈ ಕೊಳಲಿನ ಸವಿ ರಾಗವೋ**

ಇದು ಆ ಧಾರಾವಾಹಿಯಲ್ಲಿ ಆಗಾಗ ಕೇಳಿಬರುವ ಹಾಡು.

ಈ ಹಾಡು ಕೆಲವರಲ್ಲಿ ಅದೆಷ್ಟು ಹುಚ್ಚು ಹಿಡಿಸಿದೆ ಎಂದರೆ ಈ ಹಾಡೊಂದನ್ನೇ ಗಂಟಗಟ್ಟಲೆ ಸತತವಾಗಿ ಕೇಳುವವರಿದರೆ. ಜೊತೆಗೆ ಈ ಧಾರಾವಾಹಿಯ ಶೀರ್ಷಿಕೆ ಸಂಗೀತ, ಮಧ್ಯೆ ಮಧ್ಯೆ ಬರುವ ಬೇರೆ ಸಂಗೀತವೂ ಬಹಳಷ್ಟು ಜನರ ಮನಸೂರೆಗೊಂಡಿದ್ದು, ಕೆಲವರ ಮೊಬೈಲ್ ರಿಂಗ್‌ಟನ್ ಆಗಿ ರಿಂಗಣಿಸುತ್ತಿದೆ.

2018 ರ ಅಕ್ಟೋಬರ್‌ನಿಂದ ಹಿಂದಿಯ ಸ್ಟಾರ್ ಭಾರತ್‌ನಲ್ಲಿ ಪ್ರಸಾರವಾಗುತ್ತಿರುವ ಹಿಂದಿ ರಾಧಾಕೃಷ್ಣ ಧಾರಾವಾಹಿಯು ಕನ್ನಡದ ಸ್ಟಾರ್ ಸುವರ್ಣ ಚಾನಲ್‌ನಲ್ಲಿ 2020 ಮೇ 18 ರಿಂದ ಪ್ರಸಾರವಾಗುತ್ತಿದೆ. ನಾನು ಈ ಧಾರಾವಾಹಿಯ ಟಿಆರ್‌ಪಿ, ಜನಪ್ರಿಯತೆಯ ಬಗ್ಗೆ ಮಾತನಾಡುತ್ತಿಲ್ಲ. ಆಪ್ತಸಮಾಲೋಚಕಿಯಾಗಿ ನಾನು ಇದು ಕೆಲವರ ಮನಸ್ಸಿನ ಮೇಲೆ ಉಂಟುಮಾಡಿರುವ ಪರಿಣಾಮದ ಬಗ್ಗೆ ಹೇಳಲು ಬಯಸುತ್ತೇನೆ.

ಜಗತ್ತಿನ ಮೊದಲ ಹಾಗೂ ಪ್ರಮುಖ ಆಪ್ತ ಸಮಾಲೋಚಕ ಎಂದರೆ ಶ್ರೀ ಕೃಷ್ಣನೇ ಎಂಬುದು ಕೆಲವರ ಅಭಿಮತ. ಇಂಥ ಕೃಷ್ಣನ ಸಲುವಾಗಿಯೇ ಈಗ ಕೆಲವರು ಆಪ್ತ ಸಮಾಲೋಚಕರನ್ನು ಭೇಟಿಯಾಗುವಂತಿದೆ.

ನಾವು ಪುರಾಣಗಳಲ್ಲಿ ಓದಿರುವಂತೆ, ಹಿರಿಯರಿಂದ ಕೇಳಿ ತಿಳಿದಿರುವಂತೆ ಕೃಷ್ಣನ ಅನೇಕ ಗುಣಗಳಲ್ಲಿ ಹೆಚ್ಚಾಗಿ ಪ್ರಕಟವಾಗಿರುವುದು ಅವನು ತುಂಟ, ಮಾಯಾವಿ, ಹೆಂಗಳೆಯರನ್ನು ಕಾಡುವವನು ಇತ್ಯಾದಿಯಾಗಿ.

ಆದರೆ ಈಗ ಈ ಧಾರಾವಾಹಿಯಲ್ಲಿ ಕೃಷ್ಣ ವಿಶೇಷವಾಗಿ ಕಂಡುಬರುತ್ತಿರುವುದು ಕೇವಲ ಕಾಡುವವನಾಗಿ ಅಲ್ಲ; ಕಾಯುವವನಾಗಿ. ತನ್ನ ಪ್ರೀತಿಯನ್ನು, ಪ್ರೇಮಿಯನ್ನು ಕಾಯುವವನು, ಕಾಪಾಡುವವನು, ಪ್ರೀತಿಯ ಅನಂತತೆಯನ್ನು ಸಾರುವವನು, ಜಗತ್ತಿಗೇ ಪ್ರೀತಿಯನ್ನು ಕಲಿಸಲು ಬಂದವನು, ಪ್ರೀತಿಯೇ ಮೈವೆತ್ತಂತೆ ಕಾಣುವವನು, ತನ್ನ ತಾಯಿಯನ್ನು ಅಳುವಂತೆ ಮಾಡಿದವರಿಗೆ ತಕ್ಕ ಶಿಕ್ಷೆ ಕೊಡುವವನು, ಜೊತೆಗೆ ಕಷ್ಟ ಬಂದಾಗ ಸ್ವತಃ ಪರಿಹರಿಸುವವನು ಅಥವಾ ಪರಿಹಾರದ ದಾರಿ ತೋರಿಸುವವನು, ತನ್ನ ಸುತ್ತಮುತ್ತಲಿನ ಜನರಿಗೆ ನೆರವಾಗುವವನು ಇನ್ನೂ ಏನೇನೋ ಆಗಿ ಕಾಣುತ್ತಾನೆ.

'ಇಂಥ ಕೃಷ್ಣ ನನ್ನ ಮನೆಯಲ್ಲಿ ಇರಬಾರದೇ?' 'ಇಂಥ ಕೃಷ್ಣ ನನ್ನ ಸಖನಾಗಬಾರದೇ?' 'ಇಂಥ ಕೃಷ್ಣನ ಗುಣ ಇರುವವನು ನನ್ನ ಸಂಗಾತಿಯಾಗಿ ದೊರೆಯಬಾರದೇ?' 'ತಾಯಿಯ ಕಣ್ಣಲ್ಲಿ ನೀರನ್ನು ನೋಡಬಯಸದ ಕೃಷ್ಣನಂಥ ಮಗ ಇರಬಾರದೇ?'

ಹೀಗೆ ಆಲೋಚನೆಯನ್ನು ಉಂಟುಮಾಡಿರುವ ಆ ಕೃಷ್ಣ ಪರಮಾತ್ಮ, ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು, 'ಏನಾದರೂ ಪವಾಡ ಮಾಡಿ ಪ್ರಸ್ತುತ ಇರುವ ನನ್ನ ಸಂಗಾತಿಯನ್ನು ಮಾರ್ಪಡಿಸಿ ಅವನಂತೆ ಮಾಡಬಾರದೆ?' ಎನ್ನುವ ಮಟ್ಟಕ್ಕೂ ಹೋಗಿದ್ದಾನೆ.

ಕೆಲವರು ಈಗ ವಿಶೇಷವಾಗಿ ಕೃಷ್ಣನನ್ನು ಆರಾಧಿಸಲು ತೊಡಗಿದ್ದಾರೆ. 'ಇಷ್ಟದಿನ ಇಂಥ ಕೃಷ್ಣನನ್ನು ಪೂಜಿಸಲೇ ಇಲ್ಲವಲ್ಲ', 'ಕಳ್ಳ ಕೃಷ್ಣ ಅದು ಹೇಗೆ ನನ್ನಿಂದ ದೂರವಾಗಿದ್ದ, ನಾನು ಹೇಗೆ ಅವನನ್ನು ಮರೆತುಬಿಟ್ಟಿದ್ದೆ', 'ಕೃಷ್ಣನ ಜೀವನ ಮೌಲ್ಯ ನನಗೇಕೆ ಅರ್ಥವಾಗಿರಲಿಲ್ಲ, ಅವನ ನೀತಿ, ಉಪದೇಶ ನಾನು ಗ್ರಹಿಸದೇ ಹೋದೆನಲ್ಲಾ..' ಎಂದು ಪೇಚಾಡಿಕೊಂಡು ಹೊಸದಾಗಿ ಶ್ರೀ ಕೃಷ್ಣನ ಆರಾಧನೆಗೆ ತೊಡಗಿದ್ದಾರೆ.

ಅಬ್ಬಬ್ಬಾ, ಎಷ್ಟೊಂದು ಕೋರಿಕೆಗಳು, ಎಷ್ಟೊಂದು ಬದಲಾದ ನಡವಳಿಕೆಗಳು! ವಯಸ್ಸಿನ ಅಂತರವಿಲ್ಲದೆ ಹೀಗೆ ಕೇಳಿಕೊಳ್ಳುತ್ತಿರುವವರು, ಅಂದುಕೊಳ್ಳುತ್ತಿರುವವರು, ನಡೆದುಕೊಳ್ಳುತ್ತಿರುವವರು ಕೃಷ್ಣನ ಮಾಯೆಗೆ ಒಳಗಾದವರೇ ಅಥವಾ ನಿಜವಾಗಲೂ ಅವರ ಸುಪ್ತ ಮನಸ್ಸಿನಲ್ಲಿ ಅಡಗಿ ಕುಳಿತಿದ್ದ ವಿಷಯ ಈಗ ಧಾರಾವಾಹಿಯ ಕೃಷ್ಣನ ಮೂಲಕ ಹೊರಬಂದಿವೆಯೇ?

ಅದೂ ಕೃಷ್ಣನಂತೆಯೇ?– ಕೆಲವೊಮ್ಮೆ ಕೃಷ್ಣ ನಿಜ ಹೇಳಿದರೂ ಗೊತ್ತಾಗುತ್ತಿರಲಿಲ್ಲ, ಅವನು ಸೂಚ್ಯವಾಗಿ ವಿಷಯ ವ್ಯಕ್ತಪಡಿಸುತ್ತಿದ್ದರೂ ತಿಳಿಯುತ್ತಿರಲಿಲ್ಲ. ತಾನು ಮಾಡುವ ಕೆಲಸಗಳಿಗೆ ಸ್ಪಷ್ಟೀಕರಣ ನೀಡುತ್ತಲೂ ಇರಲಿಲ್ಲ. ಹಾಗಾಗಿ ಅವನು ಮಾಯಾವಿಯಾಗಿಯೇ ಪ್ರಸಿದ್ಧನಾಗಿಬಿಟ್ಟ. ಕೆಲವೊಮ್ಮೆ ನಮ್ಮ ಮನಸ್ಸುಗಳು ಹಾಗೆ, ಅರ್ಥ ಮಾಡಿಕೊಳ್ಳುವುದು ಕಷ್ಟ. ಅಂತರಂಗವನ್ನು ತೆರೆದಿಡುವುದು ಸುಲಭವಲ್ಲ, ಕೆಲವೊಮ್ಮೆ ಕೆಲವು ಭಾವನೆಗಳ ಮೂಲಕ ನಾವು ಏನೆಂಬುದನ್ನು ವ್ಯಕ್ತಪಡಿಸುವ ಪ್ರಯತ್ನ ಮಾಡಿದರೂ ಫಲ ದೊರೆಯದೇ ಹೋಗಬಹುದು. ಹಾಗಂತ ಈ ಮನಸ್ಸುಗಳು ಮಾಯಾವಿ ಆಗಲು ಸಾಧ್ಯವಿಲ್ಲ; ಕೆಲವರಿಗೆ ಅರ್ಥವಾಗಲು ಕಠಿಣವಾಗಬಹುದು.

ಇದೇ ಈಗಿನ ಒಂದು ಸಮಸ್ಯೆಯಾಗಿರಬಹುದು. ಈ ಸಮಸ್ಯೆ ಹಿಂದಿನಿಂದಲೂ ಇದ್ದು, ಈಗ ಪ್ರಕಟವಾಗುತ್ತಿರಲೂ ಬಹುದು. ಸಾಮಾನ್ಯವಾಗಿ ನಾವು ಕಷ್ಟದಲ್ಲಿ ಇರುವಾಗ ಪರಿಹಾರ ನೀಡುವ, ನಮಗೆ ಮಾರ್ಗದರ್ಶನ ಮಾಡುವ ಹಿತೈಷಿಗಳು ಬೇಕು ಎನಿಸುತ್ತದೆ. ಇನ್ನೂ ಕೆಲವೊಮ್ಮೆ, ಏನೂ ಹೆಚ್ಚಿನ ಕಷ್ಟವಿಲ್ಲದಿದ್ದರೂ ನಮ್ಮ ಭಾವನೆಗಳಿಗೆ ಸ್ಪಂದಿಸುವವರು ಇರಬೇಕು ಎನಿಸುತ್ತದೆ, ಮತ್ತೊಮ್ಮೆ ನಮ್ಮನ್ನು ಅರ್ಥ ಮಾಡಿಕೊಂಡು, ನಮಗೆ ಇಷ್ಟವಾಗುವ ರೀತಿಯಲ್ಲಿ ನಡೆದುಕೊಳ್ಳುವವರು ಸಿಗಬೇಕು ಎನಿಸುತ್ತದೆ.

ಇದು ಸಹಜವಾದದ್ದೇ. ಅಪೇಕ್ಷೆ ತಪ್ಪಲ್ಲ, ಆದರೆ ನಮ್ಮ ಪರಿಧಿಯ ವ್ಯಾಪ್ತಿಯಲ್ಲಿ ನಾವು ಬಯಸಿದಂತಹವರು ನಮಗೆ ಸಿಗದಿದ್ದರೆ, ನಮಗೆ ಸಿಗುವವರನ್ನೇ ನಾವು ಸರಿಮಾಡಿಕೊಳ್ಳಬೇಕಾಗುತ್ತದೆ, ಅವರೊಂದಿಗೆ ಹೊಂದಿಕೊಳ್ಳಬೇಕಾಗುತ್ತದೆ. ಯಾರೂ ಪರಿಪೂರ್ಣರಲ್ಲ, ಕೆಲವೊಮ್ಮೆ ನಮ್ಮ ಅಪೇಕ್ಷೆಯಲ್ಲೂ ದೋಷವಿರಬಹುದು. ನೋಡುವ ನೋಟದಲ್ಲೂ ವ್ಯತ್ಯಾಸವಿರಬಹುದು, ಇನ್ನೊಬ್ಬರನ್ನು ಅಥ ಮಾಡಿಕೊಳ್ಳುವ ರೀತಿಯಲ್ಲೂ ತಪ್ಪಿರಬಹುದು, ನಾವೇ ಯೋಚಿಸಿ ನೋಡಬೇಕು ಅಲ್ಲವೇ?

ಎಲ್ಲರೂ ಕೃಷ್ಣನಾಗಲು ಸಾಧ್ಯವಿಲ್ಲ. ಹಾಗೇ ಎಲ್ಲರೂ ರಾಧೆಯರೂ ಅಲ್ಲ. ಯಶೋದಾ ಮಾತೆಯೂ ಅಲ್ಲ, ದ್ವಾಪರ ಯುಗವಂತೂ ಅಲ್ಲವೇ ಅಲ್ಲ. ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡರೆ ನಮ್ಮನಮ್ಮ ಮನೆಯಲ್ಲಿ, ನಮ್ಮ ನಮ್ಮ ಮನಸ್ಸಿನಲ್ಲಿ ಕೃಷ್ಣನಿದ್ದೇ ಇರುತ್ತಾನೆ.

# "ದಕ್ಷತಾ ಶಾಸ್ತ್ರ" (Efficiency Science)

– ಶ್ರೀ ಧೀರೇಂದ್ರ ನಾಗರಹಳ್ಳಿ

**ಕೆಳಗಿನ ಕೆಲವು ನಿರ್ದೇಶನಗಳನ್ನು ಗಮನಿಸಿ:–**

1. ಹೊಸದಾಗಿ ತರಲಾಗಿರುವ ಜ್ಯೂಸ್/ಸಾಸ್/ಐಸ್ ಕ್ರೀಮ್/ಇನ್ನಾವುದಾದರು ಡಬ್ಬಗಳ ಮುಚ್ಚಳವನ್ನು ತೆಗೆಯಲು ಸ್ವಲ್ಪ ಮಟ್ಟಿಗೆ ಕಷ್ಟವಾಗುತ್ತಿದೆಯೆ?
2 ಮನೆಯಲ್ಲಿರುವ ಟೇಬಲ್ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಕುರ್ಚಿ ಅಳತೆಗಳು ಸರಿಯಾಗಿರದೆ, ನಮ್ಮ ಮೊಣಕಾಲು ಟೇಬಲ್ಲಿಗೆ ತಗಲುತ್ತಿದೆಯೇ?
3. ಯಾವುದಾದರು ಅಧ್ಯಯನ ಮಾಡುವಾಗ ಬೇಕಾದ ಪುಸ್ತಕಗಳು ಆ ಕ್ಷಣಕ್ಕೆ ಸಿಗದೆ ಹೋಗುವುದೆ?
4. ಅಡುಗೆ ಮನೆಯಲ್ಲಿರುವ ಸಮಾನುಗಳು ನಮ್ಮ ಅಗತ್ಯಕ್ಕೆ ಸಿಗದೆ ಚಡಪಡಿಸುವಂತಾಗುವುದೆ?
5. ಸ್ನಾನ ಗೃಹದಲ್ಲಿರುವ ಬ್ರಷ್, ಪೇಸ್ಟ ಮತ್ತು ಸೋಪುಗಳು ಎಲ್ಲವೂ ಅಚೀಚೆಯಾಗಿ ಯಾವ ವಸ್ತುಗಳು ಯಾರಿಗೆ ಸಂಬಂಧಿಸಿದ್ದು ಎನ್ನುವುದನ್ನು ಹುಡುಕುವುದಕ್ಕೆ ಬೆಳಗಿನ ಅಮೂಲ್ಯ ಸಮಯವನ್ನು ಎತ್ತಿಡಬೇಕಾದ ಅನಿವಾರ್ಯತೆ ಇದೆಯೆ?

ಇದು ವಿಜ್ಞಾನದ ಅಥವಾ ಅನ್ವಯಿಕಾ ವಿಜ್ಞಾನದ ತೀರಾ ಇತ್ತೀಚಿನ ವಿಭಾಗ. ಅದರಲ್ಲೂ ವಿಜ್ಞಾನದ ಈ ಪರಿಕಲ್ಪನೆಯನ್ನು ಬಹುತೇಕವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳು ಕೈಗಾರಿಕ ಕ್ಷೇತ್ರಗಳಲ್ಲಿ ವಿಪುಲವಾಗಿ ಅನುಷ್ಠಾನಗೊಳಿಸಿದ್ದಾರೆ. ಅಲ್ಲದೆ ಗೃಹಪಯೋಗಿ ವಸ್ತುಗಳ ಉಪಯೋಗಕ್ಕೂ ವಿಸ್ತರಿಸಿರುತ್ತಾರೆ. ಪ್ರಚಲಿತ ಭಾರತದ ಮಟ್ಟಿಗೆ ಹೇಳುವುದಾದರೆ ಈ ವಿಭಾಗದ ಪರಿಕಲ್ಪನೆ ಅಪರಿಚಿತ ಮತ್ತು ಇದನ್ನು ಜಾರಿಗೊಳಸಲು ಇರುವ ಪರಿಜ್ಞಾನದ ಮಿತಿ ಅಲ್ಲದೆ ತಂತ್ರಜ್ಞಾನದ ಕೊರತೆ ಈ ಪರಿಕಲ್ಪನೆಯನ್ನು ಅನುಷ್ಠಾನಗಳಿಸಲು ಅಡ್ಡಿಯಾಗಿದೆ. ವಿಜ್ಞಾನದ ಅಥವಾ ಅನ್ವಯಿಕಾ ವಿಜ್ಞಾನದ ವಿಭಾಗವನ್ನು ಇಂಗ್ಲೀಷ್ ನಲ್ಲಿ 'ಎರ್ಗಾನಾಮಿಕ್ಸ್' ಎಂದು ಕರೆಯುತ್ತಾರೆ. ಇದು ಗ್ರೀಕ್ ನ ಎರೆಡು ಶಬ್ದಗಳಿಂದ ಕೂಡಿದೆ 'ಎರ್ಗೊ' ಮತ್ತು 'ನೊಮಿಯೋ'. ಎರ್ಗೊ ಎಂದರೆ ಕೆಲಸ ಮತ್ತು ನೊಮಿಯೊ ಎಂದರೆ 'ನೈಸರ್ಗಿಕ ನಿಯಮಗಳು ಕನ್ನಡದ ಮಟ್ಟಿಗೆ ತರ್ಜಿಮೆ ಮಾಡಿದರೆ 'ದಕ್ಷತಾ ಶಾಸ್ತ್ರ' ಎಂದಾಗುವುದು. ವಿಜ್ಞಾನದ ಈ ವಿಭಾಗವನ್ನೆ(ಪರಿಕಲ್ಪನೆ) ಶಾಸ್ತ್ರಬದ್ಧವಾಗಿ ಅಧ್ಯಯನ ಮಾಡಲಾಗುತ್ತಿದೆ ಮತ್ತು ಪ್ರತಿಯೊಂದನ್ನು ವಿಶ್ಲೇಷಣೆಗೊಳ ಪಡಿಸಲಾಗುತ್ತಿದೆ.

"ಮನುಷ್ಯ ಮತ್ತು ಮನುಷ್ಯನಿಗೆ ಸಂಬಂಧಪಟ್ಟ ಕೆಲಸದ ಸಲಕರಣೆ ಹಾಗು ಉಪರಕಣಗಳ ವ್ಯವಸ್ಥಿತವಾಗಿ ಜೋಡಿಸಿ ಅದರಿಂದ ಹೆಚ್ಚಿನ ಉಪಯೋಗ ಪಡೆಯುವ ಪ್ರಕ್ರಿಯೆಯಲ್ಲಿ ಆಗಬಹುದಾದ ಶ್ರಮ ಮತ್ತು ತದನಂತರದ ಬಳಲಿಕೆ ಪ್ರಮಾಣವನ್ನು ಕಡಿಮೆ ಮಾಡುವ ಅಧ್ಯಯನ ಶಾಸ್ತ್ರವೆ–'ದಕ್ಷತಾ ಶಾಸ್ತ್ರ'". ಇದು ಕೇವಲ ಮನುಷ್ಯ ಮತ್ತು ಅವನಿಗೆ ಸಂಬಂಧಿಸಿದ ಸಲಕರಣೆಗಳಿಗೆ ಸಂಬಂಧಿಸಿದ ಅಧ್ಯಯನವಾಗಿರುವುದಿಲ್ಲ ಬದಲಾಗಿ ಇದು ವಿಜ್ಞಾನದ ಇನ್ನಿತರೆ ವಿಭಾಗಗಳಾದ ಮನಃ ಶಾಸ್ತ್ರ, ಸಮಾಜ ವಿಜ್ಞಾನ ಹೀಗೆ ಇನ್ನೂ ಅನೇಕ ವಿಭಾಗಗಳಿಗೂ ವಿಸ್ತರಿಸಿದೆ. ಆದರೆ ದಕ್ಷತಾ ಶಾಸ್ತ್ರವನ್ನು ಸರಳವಾಗಿ ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಇಲ್ಲಿಯ ವಿವರಣೆಯನ್ನು ಕೇವಲ ಮನುಷ್ಯ ಮತ್ತು ಅವನಿಗೆ ಸಂಬಂಧಪಟ್ಟ ಸಲಕರಣೆಗಳಿಗೆ ಮೀಸಲಿರಸಲಾಗಿದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸುಮಾರು ದಶಕಗಳ ಕೆಳಗೆ ಉತ್ಪಾದನಾ ಕ್ಷೇತ್ರಗಳಲ್ಲಿ ಕೆಲಸದ ಶ್ರಮದಿಂದ ಆಯಾಸ ಉಂಟಾಗುತಿತ್ತು. ಅದರ ನೇರ ಪರಿಣಾಮವೆನ್ನುವಂತೆ ಕಾರ್ಮಿಕರ ಕಾರ್ಯ ದಕ್ಷತೆಯಲ್ಲಿ ಆಗುತ್ತಿದ್ದ ಕೊರತೆ ಮತ್ತು ನಂತರದಲ್ಲಿ ಉತ್ಪಾದಕತೆ ಪತಾಳವನ್ನು ತಲುಪುತಿತ್ತು.

**ಉತ್ಪಾದನೆ ಕ್ಷೇತ್ರಗಳ ಕೆಲಸ – ಕಾರ್ಮಿಕರ ಕಾರ್ಯ ದಕ್ಷತೆ – ಉತ್ಪಾದಕತೆ**

ಮೇಲಿನ ಮೂರು ಅಂಶಗಳನ್ನು ತುಂಬಾ ಕೂಲಂಕುಷವಾಗಿ ವಿಶ್ಲೇಶನೆಗೆ ಒಳ ಪಡಿಸಿದಾಗ ಹೊರ ಬಿದ್ದ ಸತ್ಯ 'ಆಯಾಸ' ದ ಪ್ರಮಾಣ ಮತ್ತು ನಂತರದ ಪರಿಣಾಮ. ಹೀಗೆ ಈ ಎಲ್ಲಾ ಅಂಶಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೊಳಪಡಿಸಿದ ನಂತರದಲ್ಲಿ ಮುಂದೆ ವಿಜ್ಞಾನದ ಒಂದು ವಿಭಾಗವಾಗಿ ಹೊರಹೊಮ್ಮಿತು. ಮನುಷ್ಯ ಮತ್ತು ಕೆಲಸಕ್ಕೆ ಸಂಬಂಧ ಪಟ್ಟಿರುವ ಸಲಕರಣೆಗಳನ್ನು ವ್ಯವಸ್ಥಿತವಾಗಿ ಜೋಡಿಸಿಟ್ಟು ನಂತರದಲ್ಲಿ ಕೆಲಸಕ್ಕೆ ಶುರುವಾದರೆ ಸಲಕರಣೆಗಳನ್ನು ಹುಡುಕುವಲ್ಲಿ ವ್ಯಯಿಸುವ ಶ್ರಮ ಮತ್ತು ಸಮಯವನ್ನು ಕಡಿತಗೊಳಿಸಬಹುದು, ಎನ್ನುವುದು ಮುಖ್ಯವಾಗಿ ವಿಷದವಾಗಿರುವ ಅಂಶ.

ಈಗ 'ದಕ್ಷತಾ ಶಾಸ್ತ್ರ' ವನ್ನು ದೈನಂದಿನ ಕೆಲಸ ಕಾರ್ಯಗಳಲ್ಲಿ ಯಾವ ರೀತಿಯಾಗಿ ಬಳಸಬಹುದು ಎನ್ನುವ ಕೆಲವು ಉದಾಹರಣೆ ನೋಡುವ:–

1. ಹೊಸದಾಗಿ ತರಲಾಗಿರುವ ಜ್ಯೂಸ್/ಸಾಸ್/ಐಸ್ ಕ್ರೀಮ್ / ಇನ್ನಾವುದಾದರು ಡಬ್ಬಗಳ ಮುಚ್ಚಳವನ್ನು ತೆಗೆಯಲು ಸ್ವಲ್ಪ ಮಟ್ಟಿಗೆ ಕಷ್ಟವಾಗುತ್ತಿದೆಯೆ?

**ದಕ್ಷತಾ ಶಾಸ್ತ್ರದ ಅನುಷ್ಠಾನ :** ನೆನಪಿಡಿ ಯಾವುದೆ ಡಬ್ಬಗಳಿರ ಬಹುದು (ಜ್ಯೂಸ್/ಸಾಸ್/ಐಸ್‌ಕ್ರೀಮ್...) ಅವುಗಳ ಮುಚ್ಚಳಗಳನ್ನು ತೆಗೆಯಲು ಒಂದು ಸಣ್ಣ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಉದಾಹರಣೆ ಮುಚ್ಚಳದ ಒಂದು ತುದಿಯಲ್ಲಿ ಒಂದು ಎಳೆಯಾಕಾರಾದ ವ್ಯವಸ್ಥೆಯನ್ನು ಕೊಟ್ಟು ಮುಚ್ಚಳವನ್ನು ಸುಲಭವಾಗಿ ತೆಗೆಯುವ ವ್ಯವಸ್ಥೆ ಮಾಡಲಾಗಿರುತ್ತದೆ.ಇದರಿಂದ ನಮಗೆ ಗೊತ್ತಿಲದಂತೆ ನಾವು ದಕ್ಷತಾ ಶಾಸ್ತ್ರವನ್ನು ಬಳಸಿರುತ್ತೇವೆ

2 ಮನೆಯಲ್ಲಿರುವ ಮೇಜು ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಕುರ್ಚಿ ಅಳತೆಗಳು ಸರಿಯಾಗಿರದೆ. ನಮ್ಮ ಮೊಣಕಾಲು ಟೇಬಲ್ಲಿಗೆ ತಗಲುತ್ತಿದೆಯೇ?

೨೦ನೇ ಪುಟಕ್ಕೆ.....

# ಕರೋನಾ ಸ್ಫೋಟ ಮತ್ತು ಸಹಕಾರಿಗಳ ಪಾತ್ರ

**– ಶ್ರೀ ಎಂ.ಎನ್.ಸುಂದರ ರಾಜ್, ಅಧ್ಯಕ್ಷರು, ಕಲಾವಿದರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ**

ಸಹಕಾರಿ ಸಂಘಗಳು ಕಳೆದ ವರ್ಷ ಕರೋನಾ ರೋಗದಿಂದ ತತ್ತರಿಸಿ, ಇನ್ನೇನು ಸುಧಾರಣೆಯತ್ತ ಸಾಗುತ್ತಿರುವಾಗ ಮತ್ತೆ ಈ ರೋಗ ವ್ಯಾಪಕವಾಗಿ ಹರಡಿ, ನಮ್ಮ ಆರ್ಥಿಕ ತಳಪಾಯವನ್ನೇ ಅಲುಗಾಡಿಸುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಇದು ಸಹಕಾರಿ ಸಂಸ್ಥೆಗಳಿಗೆ ಮಾತ್ರವಲ್ಲಿ ಇಡೀ ವಿಶ್ವದ ಆರ್ಥಿಕ ಸ್ಥಿತಿಯ ಮೇಲೆ ಅಗಾಧವಾದ ಪರಿಣಾಮ ಬೀರಿದೆ. ಆದರೂ ಸಹ ಇಂತಹ ಕಾಲಘಟ್ಟದಲ್ಲಿ ನಮ್ಮ ಸಹಕಾರಿಗಳ ಪಾತ್ರ ಗಣನೀಯವಾಗಿದೆ. ಏಕೆಂದರೆ ಈ ಹಿಂದೆ ಸಂಭವಿಸಿದ ಅನೇಕ ವಿಪತ್ತುಗಳ ಸಮಯದಲ್ಲಿ ಸಹಕಾರಿ ಸಂಘಗಳು ತಮ್ಮ ಕೈಲಾದ ನೆರವನ್ನು ನೀಡಿ ಅಲ್ಪಮಟ್ಟಿಗೆ ನೆರವಾಗಿವೆ. 2008ರಲ್ಲಿ ಆರ್ಥಿಕ ಹಿನ್ನಡೆಯುಂಟಾದಾಗ, ಭೂಕಂಪದಂತಹ ನೈಸರ್ಗಿಕ ವಿಪತ್ತು ಸಂಭವಿಸಿದಾಗ ಮತ್ತಿತರ ಸಂದರ್ಭಗಳಲ್ಲಿ ಸಹಕಾರಿ ಕ್ಷೇತ್ರ ಮುಂದೆ ಬಂದು ತೀವ್ರತೆಯನ್ನು ತಗ್ಗಿಸುವಲ್ಲಿ ನೆರವಾಗಿದೆ.

ಇಂದು ಕೋವಿಡ್–19 ಮಹಾ ಮಾರಿ ನಮ್ಮ ದೇಶವನ್ನಷ್ಟೇ ಅಲ್ಲ ವಿಶ್ವದ ಎಲ್ಲೆಡೆ ಪಸರಿಸಿ ಇನ್ನಿಲ್ಲದ ಹಾನಿಯನ್ನುಂಟು ಮಾಡಿದೆ. ಇದು ನಮ್ಮ ದೇಶದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸವಾಲಾಗಿದೆ. ಈ ಹಿಂದೆ ಸುನಾಮಿ, ಬಿರುಗಾಳಿ ಮುಂತಾದ ಸಂದರ್ಭಗಳಲ್ಲಿ ಅನೇಕ ದೇಶಗಳ ಸಹಕಾರಿ ಸಂಸ್ಥೆಗಳು ಅಪಾರವಾಗಿ ನೆರವು ನೀಡಿದ ಉದಾಹರಣೆಗಳಿವೆ. 2016ರಲ್ಲಿ ಜಪಾನಿನಲ್ಲಿ ಭೂಕಂಪವಾದಾಗ, ಜಪಾನಿನ ವಿಮಾ ಸಹಕಾರ ಸಂಘಗಳು ಜನರಿಗೆ ಧೈರ್ಯತುಂಬಿ ಜನರಿಗೆ ಸುರಕ್ಷತಾ ಕ್ರಮಗಳಬಗ್ಗೆ ಜಾಗೃತಿ ಮೂಡಿಸಿದವು. ಅಲ್ಲದೆ ತೊಂದರೆಗೊಳಗಾದವರಿಗೆ ಅಪಾರವಾದ ಆರ್ಥಿಕ ಸಹಾಯ ನೀಡಿ ನೆರವಾದವು. ಜಪಾನಿ ಆರೋಗ್ಯ ಸಹಕಾರಿಗಳ ಮತ್ತು ಬಳಕೆದಾರರ ಸಂಸ್ಥೆಗಳು ವೈದ್ಯರ ತಂಡಗಳನ್ನು ಕಳುಹಿಸಿ, ಆಹಾರ, ಔಷಧ ಮುಂತಾದ ದಿನನಿತ್ಯದ ವಸ್ತುಗಳನ್ನು ನೇರವಾಗಿ ಜನರಿಗೆ ತಲುಪಿಸಿ ಎಲ್ಲರ ಮೆಚ್ಚುಗೆ ಗಳಿಸಿದವು. 50 ಬಿಲಿಯನ್ ಡಾಲರ್‌ನಷ್ಟು ಹಣ ಸಂಗ್ರಹಿಸಿ ಮನೆ ಕಟ್ಟಿಕೊಳ್ಳಲು, ನೀರು ಸರಬರಾಜಿಗೆ ಮತ್ತು ಹೊದೆಯುವ ವಸ್ತ್ರಗಳನ್ನು ನೀಡಿದ್ದು ದಾಖಲೆಯಾಗಿದೆ. ಇಂಡೋನೇಷ್ಯಾದಲ್ಲಿ 2014ರಲ್ಲಿ ಸುನಾಮಿ ಮತ್ತು ಭೂಕಂಪದ ಸಮಯದಲ್ಲಿ ಅನಾಥರಿಗೆ ಎಲ್ಲ ರೀತಿಯ ನೆರವನ್ನು ನೀಡಿದ್ದು ಸಹಕಾರಿ ಸಂಸ್ಥೆಗಳೇ. 2004ರಲ್ಲಿ ಶ್ರೀಲಂಕಾದಲ್ಲಿ ಸುನಾಮಿಯಿಂದ ಜನ ತತ್ತರಿಸಿ ಹೋದಾಗ ಪತ್ತಿನ ಸಹಕಾರಿ ಸಂಸ್ಥೆಗಳು ಮತ್ತು ಮೀನುಗಾರರ ಸಹಕಾರ ಸಂಘಗಳು ಅತಿ ದೊಡ್ಡ ರೀತಿಯಲ್ಲಿ ನೆರವಾಗಿ ಸರ್ಕಾರದ ಹೊರೆಯನ್ನು ಕಡಿಮೆ ಮಾಡಿದವು.

ಇದೀಗ ಕೋವಿಡ್–19 ನಮ್ಮ ದೇಶದಲ್ಲಿ ತುಂಬ ಹಾನಿಯನ್ನುಂಟುಮಾಡಿದೆ. ತಮ್ಮ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿಯೂ ನಮ್ಮ ಸಹಕಾರಿಗಳು ಸರ್ಕಾರಕ್ಕೆ ಎಲ್ಲ ರೀತಿಯ ಸಹಕಾರ ನೀಡುತ್ತಿರುವುದು ಶ್ಲಾಘನೀಯ. ಸಹಕಾರಿಗಳು ತಮ್ಮ ಶಕ್ತಿ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಿದ್ದೇ ಅಲ್ಲದೆ, ಕಳೆದ ವರ್ಷ ಗಣನೀಯವಾಗಿ ನಮ್ಮ ಸೌಹಾರ್ದ ಸಂಯುಕ್ತ ಸಹಕಾರಿಯ ಮೂಲಕ ಗಣನೀಯವಾಗಿ ದೇಣಿಗೆಯನ್ನು ನೀಡಿವೆ. ಈ ವರ್ಷವೂ ಸಹ ಪುನಃ ದೇಣಿಗೆ ನೀಡಲು ಆಲೋಚಿಸಿವೆ.

ಈ ರೋಗದಿಂದ ಮುಕ್ತರಾಗಲು ಹರಸಾಹಸ ಪಡುತ್ತಿರುವ ಸರ್ಕಾರದೊಡನೆ ನಮ್ಮ ಸಹಕಾರಿಗಳು ಸ್ಪಂದಿಸುವ ಅವಶ್ಯಕತೆಯಿದೆ. ಆರೋಗ್ಯ ರಕ್ಷಣೆ ಮತ್ತು ವ್ಯವಹಾರ ಅಭಿವೃದ್ಧಿಯ ದೃಷ್ಟಿಯಿಂದ ಕೆಲವೊಂದು ಆಲೋಚಿಸಿದರೆ, ಸದ್ಯದ ಪರಿಸ್ಥಿತಿ ಮತ್ತಷ್ಟು ಘೋರವಾಗಿದೆ. ಸಹಕಾರಿ ಸಂಸ್ಥೆಗಳು ಹಿಂದೆಂದಿಗಿಂತಲೂ ಈಗ ಅನೇಕ ಸವಾಲುಗಳನ್ನು ಎದುರಿಸುತ್ತಿವೆ. ಒಂದೆಡೆ ಸಾಲವಸೂಲಿಯ ಹಿನ್ನಡೆ, ಠೇವಣಿಗಳ ಹಿಂದೆಗೆತ, ಸಾಲ ನೀಡಿಕೆಗೆ ಒತ್ತಾಯ. ಇದೆಲ್ಲದರ ನಡುವೆ ಸಮಾಜಸೇವೆಯನ್ನೂ ಮಾಡುವ ಸವಾಲು ಸಹಕಾರಿಗಳದ್ದು. ಅದನ್ನು ತುಂಬ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ನಮ್ಮ ಸೌಹಾರ್ದ ಸಹಕಾರಿಗಳ ಹಿಂದಿನ ಭೀಕರ ಸ್ಥಿತಿಯ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಇಂದು ನಮ್ಮ ಸಹಕಾರಿಗಳು ಅದರಲ್ಲಿಯೂ ನಮ್ಮ ಸೌಹಾರ್ದ ಸಹಕಾರಿಗಳು ಕೋವಿಡ್ ಸಂಕಷ್ಟಕ್ಕೆ ನೆರವಾಗಬೇಕಿದೆ. ತೊಂದರೆಗೊಳಗಾದ ನಮ್ಮ ಸದಸ್ಯರಿಗೆ ನೆರವು ನೀಡಬೇಕಾಗಿದೆ. ಹಸಿದವರಿಗೆ, ರೋಗಿಗಳಿಗೆ, ಅನಾಥರಿಗೆ ಸಹಾಯಹಸ್ತ ನೀಡಬೇಕಾಗಿದೆ. ಈ ಮೂಲಕ ನಮ್ಮ ಅಳಿಲು ಕಾಣಿಕೆ ನೀಡುವ ಅವಶ್ಯಕತೆ ಇಂದು ತಲೆದೋರಿದೆ. ಈ ಪರಿಸ್ಥಿತಿಯಲ್ಲಿ ಇಫ್ಕೋದವರು ನಮಗೆ ಮಾರ್ಗದರ್ಶಿಗಳಾಗಿದ್ದಾರೆ.

ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋ–ಆಪರೇಟಿವ್ ಅಥವಾ ಇಫ್ಕೋ ಅತಿ ದೊಡ್ಡ ಸಹಕಾರಿ ಸಂಸ್ಥೆಯಾಗಿದೆ. ಇದು 1963ರಲ್ಲಿ ಪ್ರಾರಂಭವಾದಾಗ ಕೇವಲ 57 ಸಹಕಾರ ಸಂಘಗಳನ್ನು ಹೊಂದಿತ್ತು. ಆದರೆ ಈಗ 36,000 ಭಾರತೀಯ ಸಹಕಾರಿ ಸಂಸ್ಥೆಗಳ ಸಂಯೋಜನೆಯನ್ನು ಹೊಂದಿದೆ. ಸಾಮಾನ್ಯ ಜೀವವಿಮೆಯಿಂದ ಹಿಡಿದು ರಸಗೊಬ್ಬರ ಉತ್ಪಾದನೆ ಮತ್ತು ಮಾರಾಟದಲ್ಲಿ ದಾಖಲೆ ಸ್ಥಾಪಿಸಿದೆ. ಅದು ಈಗ ಕೋವಿಡ್ ಸಂಕ್ರಮಣ ಕಾಲದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಗಣನೀಯ ಮೊತ್ತವನ್ನು ಪರಹಾರ ನಿಧಿಗೆ ನೀಡಿದ್ದೇ ಅಲ್ಲದೆ, ರೈತರಲ್ಲಿ ಈ ರೋಗದ ಬಗ್ಗೆ ಜಾಗೃತಿ ಮೂಡಿಸಿ, ಆರೋಗ್ಯ ಪಾಲನೆ, ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು ಮುಂತಾದ ವಿಷಯಗಳಲ್ಲಿ ಮಾರ್ಗದರ್ಶನ ಮಾಡುತ್ತಿದೆ.
2. “Break Carona Campaign” ಎಂಬ ಚಳುವಳಿಯನ್ನು ಪ್ರಾರಂಭಿಸಿ, ರೋಗದ ಬಗ್ಗೆ ಜನಜಾಗೃತಿ ಮೂಡಿಸುವುದರ ಜೊತೆಗೆ, ಕೋವಿಡ್ ಸರಪಳಿಯನ್ನು ಮುರಿಯುವ ಕಾಯಕದಲ್ಲಿ ಯಶಸ್ಸನ್ನು ಕಾಣುತ್ತಿದೆ.
3. ರೈತರಿಗೆ ನೆರವಾಗಲಿ ಖಾರಿಫ್ ಬೆಳೆಗೆ ರಸಗೊಬ್ಬರವನ್ನು ಪೂರೈಸುತ್ತಿದೆ.

4. ಇಫ್ಕೋದ ಸುಮಾರು 400 ಅಧಿಕಾರಿಗಳು ಮತ್ತಿತರ ಸಿಬ್ಬಂದಿ ವರ್ಗದವರು 'ಇಫ್ಕೋದ ಕರೋನಾ ಸೈನಿಕರು' ಎಂಬ ತಂಡವನ್ನು ರಚಿಸಿಕೊಂಡು ರೈತರನ್ನು ಆನ್ ಲೈನ್ ಮತ್ತು ವಾಟ್ಸ್ ಆಪ್ ಮೂಲಕ ಸಂಪರ್ಕಿಸಿ, ಪರಿಹಾರ ಕಾರ್ಯವನ್ನು ಕೈಗೊಳ್ಳುತ್ತಿದ್ದಾರೆ.

5. ಇಫ್ಕೋ ಇದುವರೆಗೆ 5,5 ಮಿಲಿಯನ್ ಜನರನ್ನು ಸಂಪರ್ಕಿಸಿ ನಾಲ್ಕು ಲಕ್ಷ ಸಿ ವಿಟಮಿನ್ ಪಟ್ಟಿಗಳನ್ನು ನೀಡಿದೆ. 3.5 ಮಿಲಿಯನ್ ಜನರಿಗೆ ಔಷಧಿಯುಕ್ತ ಸಾಬೂನುಗಳು, ಮಾಸ್ಕ್‌ಗಳು, ವೈದ್ಯಕೀಯ ಕಿಟ್‌ಗಳು, ಸ್ಯಾನಿಟೈಸರ್‌ಗಳನ್ನು ಹಂಚಿದೆ. ನಾಲ್ಕು ಮಿಲಿಯನ್ ಜನರಿಗೆ ಆಹಾರದ ಪೊಟ್ಟಣಗಳನ್ನು ವಲಸೆ ಬಂದ ಕಾರ್ಮಿಕರಿಗೆ ಮತ್ತು ನಿರ್ಗತಿಕರಿಗೆ ನೀಡಲಾಗಿದೆ.

6. ಅನೇಕ ಮಹಿಳೆಯರ ಸ್ವ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಿ, ಅದರ ಸದಸ್ಯರಿಗೆ ಮಾಸ್ಕ್ ತಯಾರಿಸುವುದರ ಬಗ್ಗೆ ತರಬೇತಿ ನೀಡಲಾಗಿದೆ.

ಇವೆಲ್ಲವುಗಳನ್ನು ಪರಿಶೀಲಿಸಿದಾಗ ನಾವು ನಮ್ಮ ಸೌಹಾರ್ದದ ಮಟ್ಟದಲ್ಲಿ ಏನು ಮಾಡಬಹುದು ಎಂಬುದನ್ನು ಒಮ್ಮೆ ಪರಾಮರ್ಶಿಸಬೇಕಾಗಿದೆ. ಇದು ನಮ್ಮ ಹಿತಾಸಕ್ತಿಯ ಜೊತೆಗೆ ಸಮಾಜಸೇವೆಯನ್ನೂ ಮಾಡುವ ಸಂಕಲ್ಪ ಮಾಡಬೇಕಿದೆ. ಇದಕ್ಕೆ ನಾವೆಲ್ಲರೂ ಕೈಜೋಡಿಸಿದರೆ ಮಾತ್ರ ಕೋವಿಡ್ ಅನ್ನು ನಮ್ಮ ನೆಲದಿಂದ ಓಡಿಸಲು ಸಾಧ್ಯ. ಅದಕ್ಕಾಗಿ ನಾವು ಈ ಕೆಳಕಂಡ ಕಾರ್ಯಗಳನ್ನು ಮಾಡಬಹುದಲ್ಲವೆ?

1. ನಗರ ಪ್ರದೇಶಗಳಲ್ಲಿರುವ ಸೌಹಾರ್ದ ಸಹಕಾರಿಗಳು ನಾಲ್ಕು ಅಥವಾ ಐದು ಸಹಕಾರಿಗಳು ಒಂದು ತಂಡವನ್ನು ಮಾಡಿಕೊಂಡು ಜನಜಾಗೃತಿ ಮೂಡಿಸುವುದು ಮತ್ತು ತಮ್ಮ ಪರಧಿಯಲ್ಲಿ ಮಾಸ್ಕ್‌ಗಳು, ಸ್ಯಾನಿಟೈಸರ್‌ಗಳು ಮತ್ತು ಸಾಬೂನುಗಳನ್ನು ಅರ್ಹ ಬಡ, ನಿರ್ಗತಿಕರಿಗೆ ನೀಡುವುದು.

2. ರೋಗಿಗಳು ಮತ್ತು ರೋಗಿಗಳ ಕಡೆಯವರಿಗೆ, ಕರೋನಾ ರೋಗದ ವಿರುದ್ಧ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಆಹಾರದ ಪೊಟ್ಟಣಗಳನ್ನು ತಯಾರಿಸಿ, ಉಚಿತವಾಗಿ ನೀಡುವುದು.

3. ಕೋವಿಡ್ ಲಸಿಕಾ ಕೇಂದ್ರಗಳ ಮಾಹಿತಿ ಪಡೆದು, ಲಸಿಕೆ ಹಾಕಿಸಿಕೊಳ್ಳಲು ನೆರವಾಗುವುದು.

4. ಕೋವಿಡ್ ಸಮಯದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ತಿಳಿಸಿ, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳುವಳಿಕೆ ನೀಡಿ, ಆಡಳಿತಕ್ಕೆ ಸಹಕರಿಸಲು ನೆರವಾಗುವುದು.

5. ಸಾಧ್ಯವಾದರೆ ಸಹಕಾರಿಯ ವತಿಯಿಂದ ಪರಿಹಾರ ನಿಧಿಗೆ ದೇಣಿಗೆ ನಿಡುವುದು.

6. ಆಕ್ಸಿಜನ್ ಪ್ಲಾಂಟ್‌ಗಳನ್ನು ಸ್ಥಾಪಿಸಿ, ಆಸ್ಪತ್ರೆಗಳಿಗೆ ನೆರವಾಗುವುದು. ಈ ಬಗ್ಗೆ ನಮ್ಮ ಶಿವಮೊಗ್ಗದ ಸಹಕಾರಿಗಳು ಚಿಂತನೆಯನ್ನು ನಡೆಸಿದ್ದಾರೆ. ಅದು ಫಲಪ್ರದವಾದರೆ, ಅದಕ್ಕಿಂತ ಮಿಗಿಲಾದ ಸೇವೆ ಬೇರೊಂದಿಲ್ಲ ಎಂದು ಹೇಳಬಹುದು.

ಇದರ ಜೊತೆಗೆ ಇನ್ನೂ ಅನೇಕ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡುವುದರಿಂದ ನಾವು ಸಮಾಜದ ಗೌರವಕ್ಕೆ ಪಾತ್ರರಾಗುತ್ತೇವೆ ಅಲ್ಲದೆ, ನಮ್ಮ ಸದಸ್ಯರ ನಂಬಿಕೆಯನ್ನು ಬಲಪಡಿಸಿದಂತಾಗುತ್ತದೆ. ಸಹಕಾರಿ ಸಂಘಗಳು ಎಂದರೆ, ಕೇವಲ ಸಾಲನೀಡಿ ಬಡ್ಡಿ ಪಡೆಯುವುದಷ್ಟೇ ಅಲ್ಲ, ಗಳಿಸಿದ ಹಣದಲ್ಲಿ ಅಲ್ಪ ಮಟ್ಟಿಗೆ ಸಮಾಜಕ್ಕೆ ನೀಡಿದ ಸಮಾಧಾನ, ತೃಪ್ತಿ ಪ್ರಾಪ್ತವಾಗುತ್ತದೆ. ಈ ಕಾರ್ಯದಲ್ಲಿ ನಮ್ಮ ಎಲ್ಲ ಸಹಕಾರಿಗಳ ಪದಾಧಿಕಾರಿಗಳು, ನಿರ್ದೇಶಕರು ಮತ್ತು ಸಿಬ್ಬಂದಿ ಕೈಜೋಡಿಸುವುದು ಅವಶ್ಯಕವಾಗಿದೆ. ಸಾಮೂಹಿಕ ಹೊಣೆಗಾರಿಕೆಯಿಂದ ಮಾತ್ರ ಹಲವಾರು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ. ನೆರವಿನ ಅವಶ್ಯಕತೆಯಿರುವ ನಮ್ಮ ಸಹಕಾರಿಯ ಸದಸ್ಯರಿಗೆ ಸಾಧ್ಯವಾದಷ್ಟೂ ನೆರವಾಗಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ.

.....18ನೇ ಪುಟದಿಂದ

**ದಕ್ಷತಾ ಶಾಸ್ತ್ರದ ಅನುಷ್ಠಾನ :** ಇಲ್ಲಿ ದಕ್ಷತಾ ಶಾಸ್ತ್ರದ ಅನುಷ್ಠಾನ ಸರಿಯಾಗಿ ಆಗಿಲ್ಲ. ನಮ್ಮ ಎತ್ತರಕ್ಕೆ ಮತ್ತು ಮೊಣಕಾಲಿ ಅನುಗುಣಕ್ಕಾಗಿ ನಾವು ಮೇಜಿನ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

3. ಯಾವುದಾದರು ಅಧ್ಯಯನ ಮಾಡುವಾಗ ಬೇಕಾದ ಪುಸ್ತಕಗಳು ಆ ಕ್ಷಣಕ್ಕೆ ಸಿಗದೆ ಹೋಗುವುದೆ?

**ದಕ್ಷತಾ ಶಾಸ್ತ್ರದ ಅನುಷ್ಠಾನ :** ಇಲ್ಲಿಯೂ ಅಷ್ಟೆ ದಕ್ಷತಾ ಶಾಸ್ತ್ರದ ಅನುಷ್ಠಾನ ಸರಿಯಾಗಿ ಆಗಿಲ್ಲ, ನಮ್ಮ ಅಧ್ಯಯನದ ಉಪಯೋಗಕ್ಕಗುಣುವಾಗಿ ಪುಸ್ತಕಗಳನ್ನು ಜೋಡಿಸಿಟ್ಟರೆ ನಮಗೆ ಬೇಕಾದಾಗ ಮತ್ತು ಬೇಕಾದ ಸಮಯಕ್ಕೆ ಪುಸ್ತಕಗಳನ್ನು ಬಳಸಬಹುದು.

4. ಅಡುಗೆ ಮನೆಯಲ್ಲಿರುವ ಸಮಾನುಗಳು ನಮ್ಮ ಅಗತ್ಯಕ್ಕೆ ಸಿಗದೆ ಚಡಪಡಿಸುವಂತಾಗುವುದೆ?

**ದಕ್ಷತಾ ಶಾಸ್ತ್ರದ ಅನುಷ್ಠಾನ :** ಇಲ್ಲಿಯೂ ಅಷ್ಟೆ ದಕ್ಷತಾ ಶಾಸ್ತ್ರದ ಅನುಷ್ಠಾನ ಸರಿಯಾಗಿ ಆಗಿಲ್ಲ.ಹೌದು ನಾವು ನಮ್ಮ ಅಡುಗೆ ಕೆಲಸಕ್ಕೆ ತಕ್ಕಂತೆ ನಮ್ಮ ಸಲಕರಣೆಗಳನ್ನು ಜೋಡಿಸಿಟ್ಟರೆ ಅದರಿಂದ ಆಗಬಹುದಾದ ಶ್ರಮ ವ್ಯರ್ಥ ಮತ್ತು ಆಯಾಸವನ್ನು ತೆಗೆದು ಹಾಕಬಹುದು.

5. ಸ್ನಾನ ಗೃಹದಲ್ಲಿರುವ ಬ್ರಷ್, ಪೇಸ್ಟ ಮತ್ತು ಸೋಪುಗಳು ಎಲ್ಲವೂ ಅಚೀಕೆಯಾಗಿ ಯಾವ ವಸ್ತುಗಳು ಯಾರಿಗೆ ಸಂಬಂಧಿಸಿದ್ದು ಎನ್ನುವುದನ್ನು ಹುಡುಕುವುದಕ್ಕೆ ಬೆಳಗಿನ ಅಮೂಲ್ಯ ಸಮಯವನ್ನು ಎತ್ತಿಡಬೇಕಾದ ಅನಿವಾರ್ಯತೆ ಇದೆಯೆ?

**ದಕ್ಷತಾ ಶಾಸ್ತ್ರದ ಅನುಷ್ಠಾನ :** ಇಲ್ಲಿಯೂ ಅಷ್ಟೆ ದಕ್ಷತಾ ಶಾಸ್ತ್ರದ ಅನುಷ್ಠಾನ ಸರಿಯಾಗಿ ಆಗಿಲ್ಲ. ಹೌದು ನಾವು ನಮ್ಮ ಸ್ನಾನ ಗೃಹದಲ್ಲಿ ಬಳಕೆಯ ಅನುಗುಣವಾಗಿ ಮತ್ತು ಅವರವರ ಸಮಯಕ್ಕೆ ತಕ್ಕಂತೆ ಬ್ರಷ್,ಪೇಸ್ಟ ಮತ್ತು ಸೋಪುಗಳು ಜೋಡಿಸಿಟ್ಟರೆ ಅದರಿಂದ ಆಗಬಹುದಾದ ಶ್ರಮ ವ್ಯರ್ಥ, ವ್ಯರ್ಥ ಸಮಯ ಮತ್ತು ಆಯಾಸವನ್ನು ತೆಗೆದು ಹಾಕಬಹುದು.

# ಭಾರತ ಸಂವಿಧಾನದ ಆಶಯ ಹಾಗೂ ಪರಿಚಯ

– ಶ್ರೀ ಮಹಾಂತಪ್ಪ ಎಸ್. ಎಮ್, ಕಾನೂನು ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕೇಂದ್ರ ಕಛೇರಿ, ಬೆಂಗಳೂರು.

"Be Like a Roman, When You are in Rome" ಎಂಬ ಒಂದು ಪ್ರಸಿದ್ಧ ಗಾದೆಯಿದೆ, ಈ ಗಾದೆಯ ಮೂಲ ಅರ್ಥ ಒಂದು ದೇಶದಲ್ಲಿರಬೇಕಾದರೆ ಅಲ್ಲಿನ ನೀತಿ ನಿಯಮಗಳನ್ನ ತಿಳಿದಿರು ಎಂದರ್ಥ.

"Ignorance of Law is No Excuse" ಎಂಬುದು ಇನ್ನೊಂದು ಪ್ರಸಿದ್ಧ ಹೇಳಿಕೆ ಇದು ನಮಗೆ ಕಾನೂನು ಅಥವಾ ಸಂವಿಧಾನದ ಪ್ರಾಮುಖ್ಯತೆಯನ್ನು ಸಾರುತ್ತದೆ.

ಪ್ರತಿಯೊಬ್ಬ ನಾಗರಿಕನು ತನ್ನ ದೇಶನ ಸಂವಿಧಾನದ ಮೂಲ ಅಂಶಗಳನ್ನು ಅರಿತಿರಬೇಕಾದದ್ದು ಅವನ ಕರ್ತವ್ಯ, ನಮ್ಮ ಭಾರತ ದೇಶದ ಸಂವಿಧಾನದ ಆಶಯ ಹಾಗೂ ಪ್ರಮುಖ ಅಂಶಗಳನ್ನು ತಿಳಿದುಕೊಳ್ಳೋಣ.

ನಮ್ಮ ದೇಶದ ಸಂವಿಧಾನವು 09 ಡಿಸೆಂಬರ್ 1947 ರಿಂದ 26 ನವೆಂಬರ್ 1949ರ ಅವಧಿಯಲ್ಲಿ ಭಾರತದ ಸಂವಿಧಾನ ರಚನಾ ಸಭೆಯಿಂದ ರಚನೆಗೊಂಡಿತು.

ನಮ್ಮ ಸಂವಿಧಾನವು 26 ಜನವರಿ 1950ರಂದು ಜಾರಿಗೆ ಬಂದಿತು. ಈ ದಿನದ ಸವಿನೆನಪಿಗಾಗಿ ನಾವು ಪ್ರತಿ ವರ್ಷವು 26ನೇ ಜನವರಿಯಂದು ಗಣರಾಜ್ಯೋತ್ಸವ ಆಚರಿಸುತ್ತೇವೆ.

ಭಾರತದ ಸಂವಿಧಾನವು ಮೂಲದಲ್ಲಿ 395 ವಿಧಿಗಳನ್ನು, 22 (ನಂತರ 25) ಭಾಗಗಳನ್ನು 8 (ನಂತರ 12) ಅನುಚ್ಛೇದಗಳನ್ನು ಹಾಗೂ 104 ತಿದ್ದುಪಡಿಗಳನ್ನು ಹೊಂದಿದೆ. ನಮ್ಮ ದೇಶದ ಸಂವಿಧಾನವು ಯಾವುದೇ ದೇಶದ ಲಿಖಿತ ಸಂವಿಧಾನಕ್ಕಿಂತ ಸುಧೀರ್ಘವಾದುದು.

**ಸಂವಿಧಾನದ ಪ್ರಾಮುಖ್ಯತೆ :-**

ನಮ್ಮ ಸಂವಿಧಾನವು ನಮ್ಮ ದೇಶದ ಜನರನ್ನು ಆಳುವ ಸರ್ಕಾರದ ಮೂಲ ರಚನೆಯನ್ನು ನಿರ್ಧಿಷ್ಟಪಡಿಸುವುದಲ್ಲದೇ, ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳ ಅಧಿಕಾರದ ವ್ಯಾಖ್ಯೆ ಹಾಗೂ ಜವಾಬ್ದಾರಿಯನ್ನು ಸ್ಪಷ್ಟವಾಗಿ ನಿರ್ಧರಿಸುತ್ತದೆ. ಸಂವಿಧಾನವು ದೇಶದ ಎಲ್ಲ ಕಾನೂನುಗಳಿಗಿಂತ ಹೆಚ್ಚಿನ ಸ್ಥಾನವನ್ನು ಹೊಂದಿದೆ. ಅಲ್ಲದೇ ಸರ್ಕಾರವು ರೂಪಿಸುವ ಪ್ರತಿಯೊಂದು ಕಾನೂನು ಸಂವಿಧಾನಕ್ಕೆ ಅನುಗುಣವಾಗಿರಬೇಕು.

**ಹಿನ್ನಲೆ :-(ಸಂಪುಟ ಸಮಿತಿ)**

ಎರಡನೇ ಮಹಾಯುದ್ಧದ ನಂತರ ಇಂಗ್ಲೆಂಡ್‌ನಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ಸರ್ಕಾರವು ತನ್ನ ಭಾರತೀಯ ಧೋರಣೆಯನ್ನು ಘೋಷಿಸಿ ಸಂವಿಧಾನದ ಕರಡನ್ನು ತಯಾರು ಮಾಡಲು ಸಮಿತಿಯನ್ನು ರಚಿಸಲು ನಿರ್ಧರಿಸಿತು. ಸಂಪುಟ ಸಮಿತಿಯ ನಿರ್ದೇಶನದಂತೆ 389 ಸದಸ್ಯರನ್ನೊಳಗೊಂಡ ಭಾರತದ ಸಂವಿಧಾನದ ರಚನಾ ಸಮಿತಿ ರೂಪಗೊಂಡಿತಲ್ಲದೇ ಡಿಸೆಂಬರ್ 9, 1946ರಂದು ತನ್ನ ಕಾರ್ಯವನ್ನು ಆರಂಭಿಸಿ ನವಂಬರ್ 26, 1949ರಲ್ಲಿ ಸಂವಿಧಾನದ ರಚನಾ ಕಾರ್ಯವನ್ನು ಪೂರ್ಣಗೊಳಿಸಿತು. ಡಾ॥ ಬಿ. ಆರ್ ಅಂಬೇಡ್ಕರ್‌ರವರು ಕರಡು ಸಮಿತಿಯ ಅಧ್ಯಕ್ಷರಾಗಿದ್ದು, ನಮ್ಮ ಸಂವಿಧಾನವನ್ನು 2 ವರ್ಷ 11 ತಿಂಗಳು ಹಾಗೂ ಹಾಗೂ 18 ದಿನಗಳ ಕಾಲಾವಧಿಯಲ್ಲಿ 166 ದಿನಗಳ ಸಮಾವೇಶಗಳ ಸುಧೀರ್ಘ ಚರ್ಚೆಯ ನಂತರ ಸಿದ್ಧಗೊಂಡಿತು.

ಭಾರತ ಸಂವಿಧಾನವು ತನ್ನ ತತ್ವಗಳನ್ನು ವಿವಿಧ ರಾಷ್ಟ್ರಗಳ ಸಂವಿಧಾನಗಳ ಅಧ್ಯಯನ ಮಾಡಿದ ನಂತರ ಅವುಗಳಿಂದ ಕೆಲವು ಪ್ರಮುಖ ವಿಷಯಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಬ್ರಿಟನ್ ಸಂವಿಧಾನದಿಂದ ನಾವು ಪ್ರಮುಖವಾಗಿ ಸಂಸಧೀಯ ಸ್ವರೂಪ, ಏಕಸ್ವಾಮ್ಯ ಪೌರತ್ವ, ಶಾಸನ ರಚನೆಯನ್ನು ಪಡೆದುಕೊಂಡಿದ್ದೇವೆ.

ಅಮೇರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದಿಂದ ನಾವು ಮೂಲಭೂತ ಹಕ್ಕುಗಳು, ರಾಜ್ಯಗಳ ಒಕ್ಕೂಟದ ಸರ್ಕಾರದ ಮಾದರಿ, ನ್ಯಾಯಾಂಗದ ಸ್ವಾತಂತ್ರತೆ, ರಾಷ್ಟ್ರಪತಿಗಳ ಅಧಿಕಾರ ಇತ್ಯಾಧಿಗಳನ್ನು ಪಡೆದುಕೊಂಡಿದ್ದೇವೆ.

ಐರ್ಲೆಂಡ್ ದೇಶದ ಸಂವಿಧಾನದಿಂದ ರಾಜ್ಯ ನಿರ್ದೇಶಕ ತತ್ವಗಳನ್ನು ಪಡೆದುಕೊಂಡಿದ್ದೇವೆ.

ಫ್ರಾನ್ಸ್ ರಾಷ್ಟ್ರದಿಂದ ನಾವು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಆದರ್ಶಗಳನ್ನು ಪಡೆದುಕೊಂಡಿದ್ದೇವೆ.

ಆಸ್ಟ್ರೇಲಿಯಾದಿಂದ ಮೂಲಭೂತ ಕರ್ತವ್ಯಗಳನ್ನ ಹಾಗೂ ಜರ್ಮನಿ ದೇಶದ ಸಂವಿಧಾನದಿಂದ ತುರ್ತು ಪರಿಸ್ಥಿತಿಯ ಏರ್ಪಾಡುಗಳ ಕುರಿತ ವಿಷಯಗಳನ್ನು ಪಡೆದುಕೊಂಡಿದ್ದೇವೆ.

**ಭಾರತ ಸಂವಿಧಾನದ ಪೀಠಿಕೆ (Preamble) ಪ್ರಸ್ತಾವನೆ : ಈ ಕೆಳಗಿನಂತಿದೆ.**

ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜ್ಯಾತ್ಯಾತೀತ, ಪ್ರಜಾಸತಾತ್ಮಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ ಅದರ ಎಲ್ಲ ಪ್ರಜೆಗಳಿಗೆ ಸಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಹಾಗೂ ವಿಚಾರ ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರವನ್ನು, ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಗಳನ್ನು ದೊರಕಿಸಿ, ವ್ಯಯಕ್ತಿಕ ಘನತೆ ಮತ್ತು ದೇಶದ ಒಗ್ಗಟ್ಟು ಮತ್ತು ಐಕ್ಯತೆಗೆ ಎಲ್ಲರಲ್ಲೂ ಭ್ರಾತೃತ್ವತೆಯನ್ನು ಪ್ರೋತ್ಸಾಹಿಸಲು ನಿರ್ಧರಿಸಿ ನಮ್ಮ ಸಂವಿಧಾನದ ರಚನಾ ಸಭೆಯಲ್ಲಿ 26 ನವೆಂಬರ್ 1949ರಂದು ನಮಗೆ ನಾವೇ ಈ ಸಂವಿಧಾನವನ್ನು ಸ್ವೀಕರಿಸಿ ಶಾಸನವನ್ನಾಗಿ ವಿಧಿಸಿಕೊಳ್ಳುತ್ತೇವೆ.

ಭಾರತ ಸಂವಿಧಾನದ ಈ ಪೀಠಿಕೆ (ಪ್ರಸ್ತಾವನೆ) ನಮ್ಮ ಸಂವಿಧಾನದ

ದಿಕ್ಸೂಚಿಯಂತೆ ಕೆಲಸ ಮಾಡುತ್ತದೆ.

**ಭಾರತ ಸಂವಿಧಾನದ 12 ಅನುಸೂಚಿಗಳು :**

ಅನುಸೂಚಿ 01: ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿವರ.

ಅನುಸೂಚಿ 02: ಸಂವಿಧಾನಾತ್ಮಕ ಹುದ್ದೆಯಲ್ಲಿರುವವರ ವೇತನ ಮತ್ತು ಭತ್ಯಗಳು.

ಅನುಸೂಚಿ 03: ಪ್ರಮಾಣ ವಚನ

ಅನುಸೂಚಿ 04: ರಾಜ್ಯ ಸಭೆಯಲ್ಲಿ ರಾಜ್ಯಗಳ ಸ್ಥಾನ ಹಂಚಿಕೆ.

ಅನುಸೂಚಿ 05: ಅನುಸೂಚಿತ ಮತ್ತು ಬುಡಕಟ್ಟ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದ ವಿವರಣೆ.

ಅನುಸೂಚಿ 06: ಈಶಾನ್ಯ ರಾಜ್ಯಗಳಿಗೆ ಸಂಬಂಧಿಸಿದ ನಿಯಮಗಳು.

ಅನುಸೂಚಿ 07: ಕೇಂದ್ರ ಮತ್ತು ರಾಜ್ಯಗಳ ಅಧಿಕಾರ ಹಂಚಿಕೆ.

ಅನುಸೂಚಿ 08: 22 ಭಾಷೆಗಳ ವಿವರ.

ಅನುಸೂಚಿ 09: ಭೂ ಸುದಾರಣಾ ಕಾಯ್ದೆಯ ಬಗ್ಗೆ ವಿವರಣೆ.

ಅನುಸೂಚಿ 10: ಪಕ್ಷಾಂತರ ನಿಷೇಧ ಕಾನೂನು.

ಅನುಸೂಚಿ 11: ಪಂಚಾಯತ ಸಂಸ್ಥೆಗಳ ಅಧಿಕಾರಗಳು.

ಅನುಸೂಚಿ 12: ಮುನಿಸಿಪಾಲಿಟಿಗಳ ಅಧಿಕಾರಗಳು.

**ಭಾರತ ಸಂವಿಧಾನದಲ್ಲಿ ಒಟ್ಟಿ 22 ಭಾಗಗಳಿದ್ದು ಅವುಗಳು ಈ ಕೆಳಗಿನಂತಿವೆ.**

ಭಾಗ 01: ವಿಧಿ 1–4 ಕೇಂದ್ರದ ಆಡಳಿತ ಮತ್ತು ಕೇಂದ್ರಾಡಳಿತ ಪ್ರದೇಶಗಳು.

ಭಾಗ 02: ವಿಧಿ 5–11 ಪೌರತ್ವ.

ಭಾಗ 03: ವಿಧಿ 12–35 ಮೂಲಭೂತ ಹಕ್ಕುಗಳು.

ಭಾಗ 04: ವಿಧಿ 36–51 ರಾಜ್ಯನೀತಿ ನಿರ್ದೇಶಕ ತತ್ವಗಳು.

ಭಾಗ 04(ಎ): ವಿಧಿ 51ಎ ಮೂಲಭೂತ ಕರ್ತವ್ಯಗಳು.

ಭಾಗ 05: ವಿಧಿ 52–78 ಕಾರ್ಯಾಂಗ.

ವಿಧಿ 79–122: ಸಂಸತ್ತು.

ವಿಧಿ 123: ರಾಷ್ಟ್ರಪತಿಗಳ ಶಾಸಕಾಂಗ ಅಧಿಕಾರ.

ವಿಧಿ 124–147: ಕೇಂದ್ರ ನ್ಯಾಯಾಂಗ.

ವಿಧಿ 148–151: ಕಾಂಪ್ಟ್ರೋಲರ್ ಮತ್ತು ಅಡಿಟರ್ ಜನರಲ್‌ರವರ ಅಧಿಕಾರಗಳು.

ಭಾಗ 06: ರಾಜ್ಯಗಳು

ಭಾಗ 07: ಮೊದಲನೇ ಅನುಚ್ಛೇಧದ 'ಬಿ' ಭಾಗದಲ್ಲಿರುವ ರಾಜ್ಯಗಳ ಕುರಿತು.

ಭಾಗ 08: ಕೇಂದ್ರಾಡಳಿತ ಪ್ರದೇಶಗಳ ಕುರಿತು.

ಭಾಗ 09: ಪಂಚಾಯತಿ ಪದ್ಧತಿಗಳ ಕುರಿತು.

ಭಾಗ 09ಎ: ನಗರ ಪಾಲಿಕೆಗಳ ಕುರಿತು.

ಭಾಗ 10: ಪರಿಶಿಷ್ಟ ಪಂಗಡ ಪ್ರದೇಶಗಳು ಹಾಗೂ ಸಚಿವ ಸಂಪುಟ ಕುರಿತು.

ಭಾಗ 11: ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಕುರಿತು.

ಭಾಗ 12: ಹಣಕಾಸು ಸ್ವತ್ತು ಒಪ್ಪಂದಗಳು ಮತ್ತು ದಾವೆಗಳ ಬಗ್ಗೆ.

ಭಾಗ 13: ಭಾರತ ಸಂಸ್ಥಾನದ ಒಳಗೆ ವ್ಯಾಪಾರ ಮತ್ತು ವಾಣಿಜ್ಯಗಳ ಕುರಿತು.

ಭಾಗ 14: ರಾಜ್ಯ ಮತ್ತು ಕೇಂದ್ರದಡಿಯಲ್ಲಿರುವ ಸೇವೆಗಳ ಕುರಿತು.

ಭಾಗ 14ಎ: ಆಯೋಗಗಳ ಕುರಿತು.

ಭಾಗ 15: ಚುನಾವಣೆಗಳ ಕುರಿತು.

ಭಾಗ 16: ಕೆಲವು ವರ್ಗಗಳಿಗೆ ವಿಶೇಷ ಸೌಲತ್ತುಗಳನ್ನು ಒದಗಿಸುವ ಕುರಿತು.

ಭಾಗ 17: ಅಧಿಕೃತ ಭಾಷೆಗಳ ಕುರಿತು.

ಭಾಗ 18: ತುರ್ತು ಪರಿಸ್ಥಿಗಳ ಮುನ್ನೆರ್ಪಾಡುಗಳ ಬಗ್ಗೆ

ಭಾಗ 19: ಇತರೆ ವಿಷಯಗಳ ಬಗ್ಗೆ.

ಭಾಗ 20: ಸಂವಿಧಾನದ ತಿದ್ದುಪಡಿ ಬಗ್ಗೆ.

ಭಾಗ 21: ತಾತ್ಕಾಲಿಕ, ಹಂಗಾಮಿ ಮತ್ತು ವಿಶೇಷ ಮುನ್ನೆರ್ಪಾಡುಗಳ ಬಗ್ಗೆ.

ಭಾಗ 22: ಸಂಕ್ಷಿಪ್ತ ಶೀರ್ಷಿಕೆ ಪ್ರಾರಂಭದ ದಿನ, ಹಿಂದಿ ಭಾಷೆ ಕುರಿತು.

**ತಿದ್ದುಪಡಿಗಳು :–**

ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡಲು ಈ ಕೆಳಗಿನ ಪ್ರಕ್ರಿಯೆಗಳನ್ನು ಅನುಸರಿಸಬೇಕು.

1. ಸಂಸತ್ತಿನಲ್ಲಿ ಸಾಮಾನ್ಯ ಬಹುಮತದಿಂದ ಎಂದರೆ ಸಂಸತ್ತಿನಲ್ಲಿ ತಿದ್ದುಪಡಿ ಮತಕ್ಕೆ ಬಂದಾಗ ಅಲ್ಲಿರುವ ಅರ್ಧಕ್ಕಿಂತ ಹೆಚ್ಚು ಸಂಸಧಿಯರ ಅಂಗೀಕಾರವಿದ್ದರೆ ಈ ತಿದ್ದುಪಡಿಯನ್ನು ರಾಷ್ಟ್ರಪತಿಯ ಸಮ್ಮತಿಗೆ ಕಳುಹಿಸಬಹುದು.

2. ಸಂಸತ್ತಿನಲ್ಲಿ ವಿಶೇಷ ಬಹುಮತದಿಂದ ಎಂದರೆ ಸಂಸತ್ತಿನಲ್ಲಿ ಅರ್ಧಕ್ಕಿಂತ ಹೆಚ್ಚು ಸದಸ್ಯರು ಹಾಜರಿದ್ದು ಅದರಲ್ಲಿ 2/3 ಭಾಗ ಸಂಸಧಿಯರು ತಿದ್ದುಪಡಿಯನ್ನು ಅಂಗೀಕರಿಸಿದರೆ ಆ ತಿದ್ದುಪಡಿಯನ್ನು ರಾಷ್ಟ್ರಪತಿಯ ಸಮ್ಮತಿಗೆ ಕಳುಹಿಸಬಹುದು.

3. ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಬಗೆಗಿನ ತಿದ್ದುಪಡಿಗಳಿಗೆ ಈ ಮೇಲಿನಂತೆ ಸಂಸತ್ತಿನ ವಿಶೆಷ ಬಹುಮತವಿದ್ದು ಅದರೊಂದಿಗೆ ಕನಿಷ್ಟ ಅರ್ಧ ರಾಜ್ಯಗಳ ಶಾಸನ ಸಭೆಯಲ್ಲಿ ವಿಶೇಷ ಬಹುಮತ ಗಳಿಸಿದರೆ ಈ ತಿದ್ದುಪಡಿ ರಾಷ್ಟ್ರಪತಿ ಸಮ್ಮತಿಗೆ ಕಳುಹಿಸಬಹುದು.

ಇಂದಿನವರೆಗೆ (2ನೇ ಜನವರಿ 2020) ಭಾರತ ಸಂವಿಧಾನಕ್ಕೆ 104 ತಿದ್ದುಪಡಿಗಳನ್ನು ಮಾಡಲಾಗಿದೆ.

ನಮ್ಮ ಸಂವಿಧಾನವು ವಿಶ್ವದ ಅತಿದೊಡ್ಡ ಲಿಖಿತ ಸಂವಿಧಾನವಾಗಿದ್ದು ಪ್ರಜಾಪ್ರಭುತ್ವದ ಆಶೋತ್ತರಗಳಿಗೆ ಪೂರಕವಾಗಿದೆ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-13)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-13)



– ಶ್ರೀ ಯಶವಂತ ಡೋಂಗ್ರೆ

### ಎಸ್‌ಡಿಜಿ 13: ಹವಾಮಾನ ಬದಲಾವಣೆಗೆ ಕಾರ್ಯತಂತ್ರ

ಹವಾಮಾನ ಬದಲಾವಣೆಗಳು ಮತ್ತು ಅದರ ಪರಿಣಾಮಗಳನ್ನು ಎದುರಿಸಲು ತ್ವರಿತ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುವುದು (Take urgent action to combat climate change and its impacts) ಇಂದಿನ ಪ್ರಮುಖ ಅಗತ್ಯಗಳಲ್ಲೊಂದು. ಹವಾಮಾನದಲ್ಲಿನ ಬದಲಾವಣೆಗಳು (climate change) ಇಂದು ಜಗತ್ತಿನಾದ್ಯಂತ ವಿವಿಧ ಪ್ರಾಕೃತಿಕ ವೈಪರೀತ್ಯಗಳಿಗೆ ಕಾರಣವಾಗಿರುವುದು ಮತ್ತು ಆ ಕಾರಣಕ್ಕಾಗಿಯೇ ಎಲ್ಲೆಡೆ ಈ ವಿದ್ಯಮಾನದ ಬಗ್ಗೆ ಚರ್ಚೆ ನಡೆಯುತ್ತಿರುವುದು ಎಲ್ಲರೂ ತಿಳಿದ ವಿಷಯವಾಗಿದೆ. ಹವಾಮಾನದಲ್ಲಿನ ಬದಲಾವಣೆಗಳು, ವಿಶೇಷವಾಗಿ ಜಾಗತಿಕ ತಾಪಮಾನದ ಏರಿಕೆಯಂಥ ಪರಿಸ್ಥಿತಿಯನ್ನು ಎದುರಿಸಲು ಕ್ರಮಕೈಗೊಳ್ಳಬೇಕಾಗಿರುವುದು ಪ್ರಸಕ್ತ ಕಾಲಘಟ್ಟದ ಅಗತ್ಯ ಮತ್ತು ಸವಾಲು ಎನ್ನಬಹುದು. ಈ ಕಾರಣಕ್ಕಾಗಿಯೇ ಹವಾಮಾನದ ಬದಲಾವಣೆಯನ್ನು ಎದುರಿಸುವ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳ ಪಾತ್ರವನ್ನು 2020ರ ಅಂತಾರಾಷ್ಟ್ರೀಯ ಸಹಕಾರಿ ದಿನದ ಪ್ರಮುಖ ವಿಷಯವನ್ನಾಗಿ ಆಚರಿಸಲಾಗಿದೆ.

ಸಂಯುಕ್ತ ರಾಷ್ಟ್ರ ಸಂಘಟನೆಯ ವಾತಾವರಣ ಬದಲಾವಣೆಯಬಗೆಗಿನ ನೀತಿಗಳ (Framework Convention on Climate Change – UNFCCC) ಅನುಸಾರ "ಕಾಲದಿಂದ ಕಾಲಕ್ಕೆ ಸಹಜವಾಗಿಯೇ ಘಟಿಸುವ ಬದಲಾವಣೆಗಳಿಗೆ ಹೊರತಾಗಿ ಮತ್ತು ಭಿನ್ನವಾಗಿ ಮನುಷ್ಯನು ಪ್ರತ್ಯಕ್ಷ ಅಥವ ಪರೋಕ್ಷವಾಗಿ ನಡೆಸುವ ಯಾವುದೇ ಚಟುವಟಿಕೆಯ ಕಾರಣದಿಂದಾಗಿ ಜಾಗತಿಕ ಪ್ರಾಕೃತಿಕ ವಾತಾವರಣದಲ್ಲಿ ಆಗುವ ಬದಲಾವಣೆಯನ್ನು ಹವಾಮಾನ ಬದಲಾವಣೆ" ಎಂದು ಗುರುತಿಸಲಾಗಿದೆ. ಸರಾಸರಿ ತಾಪಮಾನದಲ್ಲಿ ಏರಿಕೆ, ಸಮುದ್ರ ಮಟ್ಟದಲ್ಲಿ ಏರಿಕೆ, ಋತುಚಕ್ರದಲ್ಲಿ ಏರುಪೇರಾಗುವುದು, ಅನಿರೀಕ್ಷಿತ ಹವಾಮಾನ ವೈಪರೀತ್ಯಗಳು, ಸಸ್ಯ ಮತ್ತು ವನ್ಯಜೀವಿಗಳ ಸಂಖ್ಯೆ ಮತ್ತು ವೈವಿಧ್ಯತೆಯಲ್ಲಿ ಬದಲಾವಣೆಗಳಾಗುವುದು, ಮುಂತಾದುವುಗಳನ್ನು ಹವಾಮಾನ ಬದಲಾವಣೆಯ ಪ್ರಮುಖ ಪರಿಣಾಮಗಳೆಂದು ಗುರುತಿಸಲಾಗುವುದು. ಈ ಪರಿಣಾಮಗಳು ಜಾಗತಿಕವಾಗಿ, ಅದರಲ್ಲೂ ವಿಶೇಷವಾಗಿ ಈಗಾಗಲೇ ಸಮಸ್ಯೆಗಳನ್ನು ಎದುರಿತ್ತಿರುವ ದೇಶಗಳು ಮತ್ತು ಸಮುದಾಯಗಳ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತಿವೆ.

ವಾತಾವರಣದ ಬದಲಾವಣೆಗೆ ಒಂದೆಡೆಯಿಂದ ಜನರ ಜೀವನ ಶೈಲಿ, ಕೃಷಿ ಪದ್ಧತಿ ಮತ್ತು ವಿವಿಧ ಪ್ರಾಕೃತಿಕ ಸಂಪತ್ತಿನ ಬಳಕೆಯ ರೀತಿಗಳು ಕಾರಣವಾಗಿದ್ದರೆ ಇನ್ನೊಂದೆಡೆಯಿಂದ ಕೈಗಾರಿಕೆಗಳು, ಅಭಿವೃದ್ಧಿಯ ಭಾಗವಾಗಿ ಕಾಡುಗಳನ್ನು ಕಡಿಯುವುದು, ಹಸಿರು ಕಡಿಮೆಯಾಗುತ್ತಿರುವುದು ಹೀಗೆ ಹಲವು ಕಾರಣಗಳನ್ನು ನೀಡಬಹುದು. ಒಟ್ಟಾರೆ ಇದು ಒಂದು ಸಂಕೀರ್ಣ ಸಮಸ್ಯೆಯಾಗಿದ್ದು ಸಾಮಾನ್ಯ ಜನರು, ಸಂಸ್ಥೆಗಳು, ಸರಕಾರಗಳು, ಅಂತಾರಾಷ್ಟ್ರೀಯ ಸಂಘಟನೆಗಳು ಹೀಗೆ ಎಲ್ಲರ ಸಹಕಾರ ಮತ್ತು ಸಾಂಘಿಕ ಪ್ರಯತ್ನದಿಂದ ಮಾತ್ರ ಇದನ್ನು ಎದುರಿಸಬಹುದಾಗಿದೆ.

ಹವಾಮಾನ ಬದಲಾವಣೆಯ ಬಗೆಗಿನ ಸುಸ್ಥಿರ ಅಭಿವೃದ್ಧಿಯ ಗುರಿಯಲ್ಲಿ ಹಲವು ನಿದಿಷ್ಟ ಕಾರ್ಯಸೂಚಿಗಳನ್ನು ನೀಡಲಾಗಿದೆ. ಎಲ್ಲ ದೇಶಗಳೂ ತಮ್ಮ ಪರಿಧಿಯಲ್ಲಿ ಹವಾಮಾನ ಸಂಬಂಧಿತ ಅಡಚಣೆಗಳನ್ನು ತಡೆದುಕೊಳ್ಳುವ ಮತ್ತು ಬದಲಾವಣೆಗಳಿಗೆ ಹೊಂದಿಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದೂ ಮತ್ತು ಇಂತಹ ಕಾರ್ಯಕ್ರಮಗಳನ್ನು ತಮ್ಮ ರಾಷ್ಟ್ರೀಯ ಯೋಜನೆಗಳು, ನೀತಿಗಳು ಮತ್ತು ಕಾರ್ಯತಂತ್ರಗಳಲ್ಲಿ ಸಮೀಕರಿಸಬೇಕೆಂದೂ ಈ ಗುರಿಯು ಆಶಿಸುತ್ತದೆ. ಸಾರ್ವತ್ರಿಕ ನೆಲೆಯಲ್ಲಿ ಹವಾಮಾನ ಬದಲಾವಣೆಯ ಬಗೆಗಿನ ಒಟ್ಟಾರೆ ಅರಿವುನ್ನು ಹೆಚ್ಚಿಸುವುದು ಮತ್ತು ಈ ಬದಲಾವಣೆಗಳಿಗೆ ಹೊಂದಿಕೊಳ್ಳುವ ಮತ್ತು ಅದನ್ನು ಕಡಿಮೆ ಮಾಡುವ 'ಬಗೆಗಿನ ತಿಳುವಳಿಕೆ ಮೂಡಿಸುವುದು ಮತ್ತು ಹೀಗೆ ಮಾಡಲು ಅಗತ್ಯವಾದ ಮಾನವ ಸಂಪನ್ಮೂಲ ಹಾಗೂ ಇತರೆ ಪರಿಕರಗಳನ್ನು ಸಿಧ್ಧವಾಗಿಸಲು ಎಲ್ಲ ದೇಶಗಳೂ ಪಣತೊಡಬೇಕೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ. ಹವಾಮಾನ ಬದಲಾವಣೆಯಿಂದ ತೊಂದರೆಗೊಳಗಾಗುವ ಅಭಿವೃದ್ಧಿಶೀಲ ದೇಶಗಳ ಸಮುದಾಯಗಳಿಗೆ ನೆರವಾಗಲು ಅಭಿವೃದ್ಧಿಹೊಂದಿದ ದೇಶಗಳು ಒಟ್ಟಾಗಿ 2020ರೊಳಗಾಗಿ 100 ಶತಕೋಟಿ ಡಾಲರ್ ನಿಧಿಯನ್ನು ಒಟ್ಟುಗೂಡಿಸಬೇಕೆಂಬ ನಿರ್ದೇಶನವನ್ನೂ ಈ ಗುರಿಯಲ್ಲಿ ನೀಡಲಾಗಿದೆ. ಅತ್ಯಂತ ಮುಖ್ಯವಾಗಿ ಎಲ್ಲ ಜನರೂ ಮತ್ತು ಸಂಘಟನೆಗಳೂ ತಮ್ಮದೇ ರೀತಿಯಲ್ಲಿ, ತಮ್ಮಿಂದಾದಷ್ಟು ವಾತಾವರಣ ಮತ್ತು ಪರಿಸರ ಸ್ನೇಹೀ ಶೈಲಿಗಳನ್ನು ಅಳವಡಿಸಿಕೊಳ್ಳುವುದು ಅತಿ ಅಗತ್ಯವೆಂದು ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ 13ನೇ ಗುರಿಯು ಪರಿಭಾವಿಸುತ್ತದೆ.

### ಸಹಕಾರಿ ಸಂಘಟನೆಗಳ ಪಾತ್ರ :

ಜಗತ್ತಿನಾದ್ಯಂತ ಸಹಕಾರಿ ಸಂಘಟನೆಗಳು ಹವಾಮಾನ ಬದಲಾವಣೆಯ ಗತಿಯನ್ನು ಕಡಿಮೆಮಾಡುವಲ್ಲಿ ತಮ್ಮದೇ ರೀತಿಯಲ್ಲಿ ಸಕ್ರಿಯವಾಗಿವೆ. ಡಿಜಿಟಲೀಕರಣದ ಮೂಲಕ ಪೇಪರ್ ಮತ್ತು ಮುದ್ರಣದ ಬಳಕೆಯನ್ನು ಕಡಿಮೆಮಾಡುತ್ತ ಕಾರ್ಬನ್ ಹೊರಸೂಸುವಿಕೆಯನ್ನು ಕಡಿತಗೊಳಿಸುವಂತಹ ಸಾಮಾನ್ಯ ಚಟುವಟಿಕೆಯಿಂದ ಹಿಡಿದು, ವಾತಾವರಣದ ಮರುಶಕ್ತಿ ಜೋಡಣೆಯಂತಹ ದೊಡ್ಡ ಮಟ್ಟದ ಕೆಲಸಗಳವರೆಗೆ ಸಹಕಾರಿ ಸಂಸ್ಥೆಗಳ ದೇಣಿಗೆ ಇರುವುದನ್ನು ಗಮನಿಸಬಹುದಾಗಿದೆ. ಸುಸ್ಥಿರ ಅಭಿವೃದ್ಧಿಯ ಬಗೆಗಿನ ಇತರೆ ಹಲವು ಗುರಿಗಳಲ್ಲಿರುವಂತೆ ಈ ವಿಷಯದಲ್ಲಿಯೂ ಐರೋಪ್ಯದೇಶಗಳ ಸಹಕಾರಿ ಸಂಘಟನೆಗಳು ಮುಂಚೂಣಿಯಲ್ಲಿವೆ. ಸ್ವೀಡನ್‌ನ ಸಹಕಾರಿ ಯೂನಿಯನ್ ತನ್ನ ಎಲ್ಲ ಸದಸ್ಯ ಸಹಕಾರಿ ಸಂಘಟನೆಗಳೂ ಮರುಬಳಕೆಯ ಇಂಧನ ಬಳಕೆಯನ್ನು ವೃಧ್ಧಿಸಲು ಮತ್ತು ಒಟ್ಟಾರೆ ವಿದ್ಯುಚ್ಛಕ್ತಿ ಬಳಕೆಯನ್ನು ಕಡಿಮೆ ಮಾಡುತ್ತಾ ಗ್ರೀನ್ ಹೌಸ್ ಗ್ಯಾಸ್ ಹೊರಸೂಸುವ ಪ್ರಮಾಣವನ್ನು ಕಡಿಮೆಮಾಡುವತ್ತ ಪ್ರಮುಖವಾಗಿ ಕಾರ್ಯನಿರತವಾಗಿವೆ. ಜರ್ಮನಿ ಮತ್ತು

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 24
Licensed to post without Prepayment License No. PMG BG/WPP-384/2020-2022.

ನಾರ್ವೆ ದೇಶದ ಸಹಕಾರಿ ಸಂಘಗಳು ಪ್ರಮುಖವಾಗಿ ನವೀನ ಇಂಧನ ಮೂಲಗಳಾದ ಸೌರ ವಿದ್ಯುತ್ ಮತ್ತು ವಾಯುಮೂಲದ ವಿದ್ಯುತ್ ಉತ್ಪಾದನೆ ಹಾಗೂ ಬಳಕೆಯನ್ನು ತಮ್ಮ ಆದ್ಯತೆಯನ್ನಾಗಿ ಮಾಡಿಕೊಂಡಿವೆ.

ದಕ್ಷಿಣ ಅಮೇರಿಕೆಯಲ್ಲಿ ಅರ್ಜೆಂಟೈನ ಮತ್ತು ಬ್ರೆಝಿಲ್‌ನ ಸಹಕಾರಿ ಸಂಘಟನೆಗಳು ಹವಾಮಾನ ಬದಲಾವಣೆಯ ಸಮಸ್ಯೆಯನ್ನು ಎದುರಿಸಲು ಹಲವು ಉಪಕ್ರಮಗಳನ್ನು ತೆಗೆದುಕೊಂಡಿವೆ. ಬ್ರೆಝಿಲ್‌ನ 22 ಸಹಕಾರಿ ಸಂಘಗಳ ಮಹಾಮಂಡಲವಾದ 'ರೆಡೆ ಕಟ ಸಾಂಫ್', ವಿವಿಧ ರೀತಿಯ ತ್ಯಾಜ್ಯಗಳನ್ನು ಮರು ಸಂಸ್ಕರಣ ಮಾಡುವಮೂಲಕ ಮರುಬಳಕೆ ಸಾಧ್ಯವಾಗುವಂತೆ ಮಾಡಿವೆ. ಇದರಲ್ಲಿ ಕಾಗದ, ಪ್ಲಾಸ್ಟಿಕ್, ಗಾಜು ಮತ್ತು ಲೋಹದ ತ್ಯಾಜ್ಯಗಳು ಸೇರಿದ್ದು ಹಲವು ಉತ್ಪಾದನಾ ಮತ್ತು ಸಂಸ್ಕರಣ ಉದ್ದಿಮೆಗಳ ಸಹಯೋಗದಲ್ಲಿ ಈ ಉತ್ತಮ ಕಾರ್ಯದಲ್ಲಿ ನಿರತವಾಗಿವೆ. ಏಶ್ಯಾದಲ್ಲಿ ಜಪಾನ್ ಮತ್ತು ಕೊರಿಯ ದೇಶಗಳ ಕೃಷಿ ಸಹಕಾರ ಸಂಘಗಳು ಮತ್ತು ಗ್ರಾಹಕ ಸಹಕಾರಿ ಸಂಘಗಳು ಹವಾಮಾನ ಬದಲಾವಣೆಯ ತಡೆಯ ಕಾರ್ಯಚಟುವಟಿಕೆಗಳ ಬಗ್ಗೆ ದೀರ್ಘಾವಧಿ ನೀತಿಗಳನ್ನು ರಚಿಸಿಕೊಂಡು ಕಾರ್ಯ ಪ್ರವೃತ್ತವಾಗಿವೆ.

ಹವಾಮಾನ ಬದಲಾವಣೆಯ ಸಮಸ್ಯೆಗೆ ಸ್ಪಂದಿಸುತ್ತಿರುವ ಮತ್ತು ಈ ಕುರಿತು ಹಲವು ಚಟುವಟಿಕೆಗಳನ್ನು ನಡೆಸುತ್ತಿರುವ ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿಯೂ ಕಾಣಬಹುದಾಗಿದೆ. ಪುಣೆ ನಗರದಲ್ಲಿರುವ 'ಸ್ವಛ್' ತ್ಯಾಜ್ಯ ಸಂಗ್ರಹಣಾ ಮತು ಸಂಸ್ಕರಣ ಸಹಕಾರಿ ಸಂಘವು ವಾತಾವರಣಕ್ಕೆ ಮಾರಕವಾದ ಪ್ಲಾಸ್ಟಿಕ್ ಮತ್ತು ಇ–ತ್ಯಾಜ್ಯವೂ ಸೇರಿದಂತೆ ಎಲ್ಲ ಬಗೆಯ ರದ್ದಿ/ತ್ಯಾಜ್ಯಗಳನ್ನು ಸಂಗ್ರಹಿಸಿ ಸಂಸ್ಕರಿಸುತ್ತಾ ಜನಮನ್ನಣೆಗಳಿಸಿದೆ. ಗುಜರಾತ್‌ನ ಸೂರತ್ ಜಿಲ್ಲಾ ಸಹಕಾರಿ ಬ್ಯಾಂಕ್, ತನ್ನ ನೂತನ ಮುಖ್ಯ ಕಛೇರಿ ಕಟ್ಟಡವನ್ನು ಪರಿಸರ ಮತ್ತು ವಾತಾವರಣದ ಅಗತ್ಯಗಳ ಆಧಾರದಲ್ಲಿ ಕಟ್ಟುವ ಮೂಲಕ ಇಂತಹ ಪ್ರಮುಖ ಮತ್ತು ವಿನೂತನ ಮಾದರಿ ಅನುಸರಿಸಿರುವ ದೇಶದ ಮೊದಲ ಸಹಕಾರಿ ಸಂಘವೆಂದು ಹೆಸರು ಗಳಿಸಿದೆ. ಗುಜರಾತ್‌ನ ದುಂಡಿ ಸೌರ ವಿದ್ಯುತ್ ಉತ್ಪಾದನಾ ಸಹಕಾರಿ ಸಂಘವು ನವೀಕರಿಸಬಹದಾದ ಮೂಲಗಳಿಂದ ಗ್ರಾಮೀಣ ಪ್ರದೇಶದಲ್ಲಿನ ವಿದ್ಯುತ್ ಅಗತ್ಯಗಳನ್ನು ಪೂರೈಸುತ್ತಾ ಹೆಸರುಗಳಿಸುತ್ತಿದ್ದರೆ, ಇಫ್ಕೋ ಸಹಕಾರ ಸಂಘದ ಪ್ರಾಯೋಜನೆಯಲ್ಲಿ ಆರಂಭಿಸಲಾಗಿರುವ ಭಾರತೀಯ ಕೃಷಿ ಅರಣ್ಯ ಅಭಿವೃದ್ಧಿ ಸಹಕಾರಿ ಸಂಘವು (INDIAN FARM FOREST DEVELOPMENT COOPERATIVE) ದೇಶದ ಬೇರೆ ಬೇರೆ ಭಾಗಗಳಲ್ಲಿ ಸ್ಥಳೀಯ ತಳಿಗಳನ್ನೇ ಹೊಂದಿದ ಅರಣ್ಯವನ್ನು ಅಭಿವೃದ್ಧಿಪಡಿಸುತ್ತ, ಹಸಿರು ಹೊದಿಕೆಯನ್ನು ವೃದ್ಧಿಸುವ ಯೋಜನೆಯನ್ನು ಹೊಂದಿದೆ.

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಪ್ರತಿಯೊಂದು ಸಹಕಾರಿ ಸಂಘಟನೆಯೂ ಹವಾಮಾನ ಬದಲಾವಣೆಯ ಸಮಸ್ಯೆಯ ಪರಿಣಾಮಗಳನ್ನು ಕಡಿಮೆ ಮಾಡುವ ದಿಸೆಯಲ್ಲಿ ತನ್ನದೇ ರೀತಿಯಲ್ಲಿ ಕಾರ್ಯಪ್ರವೃತ್ತವಾಗಬಹುದೆಂಬುದನ್ನು ಕಾಣಬಹುದಾಗಿದೆ. ಸಹಕಾರಿ ಸಂಘಗಳು ಈ ಕೆಳಗೆ ತಿಳಿಸಿದಂತಹ ಸುಲಭ ಮಾರ್ಗಗಳ ಅನುಸರಣೆಯೊಂದಿಗೆ ತಮ್ಮ ಚಟುವಟಿಕೆಗಳನ್ನು ಆರಂಭಿಸಬಹುದಾಗಿದೆ.

1. ಪೇಪರ್‌ನ ಬಳಕೆ ಮತ್ತು ಮುದ್ರಣವನ್ನು ಆದಷ್ಟೂ ಕಡಿಮೆಮಾಡಲು ಮತ್ತು ಈ ಮೂಲಕ ವಾತಾವರಣಕ್ಕೆ ಕಾರ್ಬನ್ ಬಿಡುಕಗಡೆಯ ಪ್ರಮಾಣವನ್ನು ಕಡಿಮೆಮಾಡಲು ಡಿಜಿಟಲೀಕರಣದತ್ತ ಗಮನಹರಿಸುವುದು.
2. ಒಂದು ಕಡೆ ಉಪಯೋಗಿಸ್ಪಟ್ಟು ಇನ್ನೊಂದೆಡೆ ಖಾಲಿಇರುವ ಪೇಪರ್‌ಗಳನ್ನು ಪುನ: ಉಪಯೋಗಿಸುವುದು.
3. ಸಂಸ್ಥೆಯ ಎಲ್ಲ ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಮತ್ತು ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಪ್ರಯತ್ನಿಸುವುದು
4. ಎಲ್ಲ ಕಟ್ಟಡಗಳನ್ನು ಪ್ರಾಕೃತಿಕ ಗಾಳಿ, ಬೆಳಕು ಹೆಚ್ಚು ಬರುವಂತೆ ವಿನ್ಯಾಸಗೊಳಿಸುವುದು ಮತ್ತು ಏರ್ ಕಂಡಿಶನರ್‌ಗಳ ಬಳಕೆ ಕಡಿಮೆಮಾಡಲು ಪ್ರಯತ್ನಿಸುವುದು
5. ಎಲ್ಲ ಬಗೆಯ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ವಿಂಗಡಿಸುವುದು ಮತ್ತು ಸಾಧ್ಯವಿರುವುದನ್ನು ತಾವೇ ಸಂಸ್ಕರಿಸುವುದು (ಉದಾಹರಣೆಗೆ ಹಸಿ ಕಸವನ್ನು ಗೊಬ್ಬರ ಅಥವ ಜೈವಿಕ ಗ್ಯಾಸ್ ಉತ್ಪಾದನೆ) ಮತ್ತು ಇತರೆ ತ್ಯಾಜ್ಯವನ್ನು (ಉದಾಹರಣೆಗೆ ಗಾಜು, ಕಬ್ಬಿಣ, ಇ–ತ್ಯಾಜ್ಯ ಇತ್ಯಾದಿ) ಸಂಸ್ಕರಣಾ ಘಟಕಗಳಿಗೆ ನೀಡುವುದು.
6. ಸದಸ್ಯರುಗಳಿಗೆ ಹವಾಮಾನ ಬದಲಾವಣೆಯ ಕಾರಣಗಳು, ಪರಿಣಾಮಗಳು ಮತ್ತು ಈ ಬಗ್ಗೆ ಅವರುಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುವುದು.
7. ಹಲವು ಸಹಕಾರಿ ಸಂಘಗಳು ಒಟ್ಟಾಗಿ ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ನವೀಕರಿಸಬಹುದಾದ ಇಂಧನದ ಉತ್ಪಾದನಾ ಘಟಕಗಳ ಸ್ಥಾಪನೆಯಂತಹ ಚಟುವಟಿಕೆಗಳನ್ನು ನಡೆಸುವುದು
8. ಪರ್ಯಾಯ ಇಂಧನವನ್ನು ಬಳಸುವ ವಾಹನ ಹಾಗೂ ಯಂತ್ರಗಳನ್ನು ಉಪಯೋಗಿಸಲು ಪ್ರಯತ್ನಿಸುವುದು
9. ಸಂಸ್ಥೆಯ ಸುತ್ತ ಮುತ್ತ ಗಿಡ ಮರಗಳನ್ನು ಬೆಳೆಸುವುದು ಮತ್ತು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸಾಧ್ಯವಿರುವಲ್ಲೆಲ್ಲ ಹಸಿರು ಹೊದಿಕೆಯನ್ನು ಹೆಚ್ಚಿಸಲು ಪರಯತ್ನಿಸುವುದು
10. ಸಂಸ್ಥೆಯು ಉತ್ಪಾದಿಸುವ ಮತ್ತು ಬಳಸುವ ವಸ್ತುಗಳಲ್ಲಿ ಆದಷ್ಟು ರಾಸಾಯನಿಕ ಮತ್ತು ಪರಿಸರಕ್ಕೆ ಹಾನಿಕಾರಕವಾದ ಇರತೆ ಅಂಶಗಳು ಇರದಂತೆ ಕ್ರಮವಹಿಸುವುದು.

ಮೇಲೆ ಹೇಳಿದ ಚಟುವಟಿಕೆಗಳು ಕೇವಲ ಕೆಲವು ಮಾತ್ರವಾಗಿದ್ದು, ಇವುಗಳಲ್ಲದೆ ಪ್ರತಿ ಸಹಕಾರ ಸಂಸ್ಥೆಯ ಕಾರ್ಯಚಟುವಟಿಕೆಗಳು, ಕಾರ್ಯ ವ್ಯಾಪ್ತಿಯ ಪ್ರದೇಶ, ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ನೆಲೆ ಇವುಗಳ ಆಧಾರದಲ್ಲಿ ಬೇರಾವುದೇ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010